## 43

# ಕ್ಲೇಶಪಡಿಸುವ ಅಡ್ಡಿಪಡಿಸುವಿಕೆಯೋ ಅಥವಾ ಪ್ರಯೋಜನಕಾರಿಯಾದ ವಿರಾಮವೋ?

### ಓದುವ ಮನೆಪಾಠ #17

VI. ಮೂರನೇ ಪಸ್ಕದಿಂದ, ಆತನು ಬೆಥನಿಗೆ ಹಿಂದಿರುಗಿದ ಸಮಯದವರೆಗೆ.[1]
- A. ಮೂರನೇ ಪಸ್ಕ (ನೋಡಿ ಯೋಹಾನ 6:4; 7:1).
- B. ಸಂಪ್ರದಾಯದ ವಿರುದ್ಧ (ಮತ್ತಾಯ 15:1-20; ಮಾರ್ಕ 7:1-23).
- C. ಹೆರೋದನ ಕ್ಷೇತ್ರದಿಂದ ವರ್ಗಾವಣೆ (ಮತ್ತಾಯ 15:21; ಮಾರ್ಕ 7:24).
- D. ಫೊಯಿನಿಕೆಯ ಕಾನಾನ್ ಸ್ತ್ರೀಯ ಮಗಳನ್ನು ಸ್ವಸ್ಥಪಡಿಸಿದ್ದು (ಮತ್ತಾಯ 15:22-28; ಮಾರ್ಕ 7:25-30).
- E. ಹೆರೋದನ ಕ್ಷೇತ್ರವನ್ನು ಓರೆ ಮಾಡಿದ್ದು (ಮತ್ತಾಯ 15:29; ಮಾರ್ಕ 7:31).
- F. ಕಿವುಡನನ್ನು ಹಾಗು ಇನ್ನೂ ಇತರರನ್ನು ಗಣಪಡಿಸಿದ್ದು (ಮತ್ತಾಯ 15:30, 31; ಮಾರ್ಕ 7:32-37).
- G. ನಾಲ್ಕು ಸಾವಿರ ಪುರುಷರಿಗೆ ಊಟನೀಡಿದ್ದು (ಮತ್ತಾಯ 15:32-39; ಮಾರ್ಕ 8:1-9).

### ಪೀಠಿಕೆ

ನಾನು ಅಡ್ಡಿಪಡಿಸುವಿಕೆಯನ್ನು ಸರಿಯಾಗಿ ನಿಭಾಯಿಸುತ್ತಿಲ್ಲ. ನಾನು ಪ್ರತಿದಿನದ ಯೋಜನೆಯನ್ನು ಮಾಡಬಯಸುತ್ತೇನೆ. ನಾನು ಪ್ರತಿಯೊಂದು ವಾರದ, ತಿಂಗಳಿನ, ಮತ್ತು ವರ್ಷದ ಯೋಜನೆಯನ್ನು ಸಹ ಹಾಕಿಕೊಳ್ಳಲು ಬಯಸುವವನಾಗಿದ್ದೇನೆ. ನಾನು ಮಾಡಬೇಕೆಂಬುದನ್ನು ಮತ್ತು ಪ್ರತಿಯೊಂದು ಕಾರ್ಯವನ್ನು ಸಂಪೂರ್ಣಗೊಳಿಸಲು ಸುಮಾರಾಗಿ ಅದು ಎಷ್ಟು ಸಮಯವನ್ನು ತೆಗೆದುಕೊಳ್ಳಬಲ್ಲದೆಂದೂ ನಾನು ಬಲ್ಲೆನು. ನನ್ನ ವೇಳಾ ಪಟ್ಟಿಯಲ್ಲಿ ಅಡ್ಡಿಪಡಿಸುವಿಕೆಗೆ ಯಾವ ಸ್ಥಳವೂ ಇಲ್ಲ. ಹೀಗೆ ಅಡ್ಡಿಪಡಿಸುವಿಕೆಯು ಬರುತ್ತವೆ - ಮತ್ತು ತಪ್ಪದೇ ಬರುತ್ತವೆ - ಅದು ನನ್ನನ್ನು ಆಶಾಭಂಗಪಡಿಸುವುದಾಗಿದೆ.

ವಿಶೇಷವಾಗಿ ಪೂರ್ಣ ಪ್ರಮಾಣದ ಬೋಧಕನಾದಂತಹ ನಾನು ನನ್ನ ನಾಲ್ವತ್ತು ವರ್ಷದ ಆರಂಭದಿಂದಲೂ ಕಷ್ಟಪಟ್ಟಿದ್ದೇನೆ. ಸೌವಾರ್ತಿಕರ ಕೆಲಸದ ಮೇಲಿನ ಪುಸ್ತಕವು ಪ್ರತಿದಿನ ಕೆಲಸದ ಕಾರ್ಯಕ್ರಮವು ಅಡ್ಡಿಪಡಿಸುವಿಕೆಯ ಸಮಯಕ್ಕೆ ಅನುವುಮಾಡಿಕೊಡಬಹುದು. ಆ ಅಡ್ಡಿಪಡಿಸುವಿಕೆಯ ಕೆಲಸಾರಿ ಕರ್ತನಿಗಾಗಿ ಯೋಜಿಸಿದ್ದಕಿಂತ ಹೆಚ್ಚಾಗಿ ಫಲವನ್ನು ಕೊಡುವುದಾಗಿರುತ್ತದೆ ಎಂದು ಈ ಪುಸ್ತಕಗಳ ಲೇಖಕರು ಸೂಚಿಸುವವರಾಗಿದ್ದಾರೆ. ಇದನ್ನು ತಿಳಿದಾಗಲೂ ಕೂಡ ನಾನು ಪ್ರತಿದಿನ ಸಂಪೂರ್ಣಗೊಳಿಸಬೇಕಾದುದ್ದನ್ನು ಇನ್ನೂ ಹೆಚ್ಚಾದವುಗಳನ್ನು ನಾನು ಇನ್ನೂ ಪಟ್ಟಿಮಾಡಿಕೊಳ್ಳುತ್ತೇನೆ ಮತ್ತು ಇದು ಆಗದಿದ್ದಾಗ ನಾನು ನಿರಾಶನಾಗುತ್ತೇನೆ.

ಈ ಪಾಠದಲ್ಲಿ, ಯೇಸು ಅಡ್ಡಿಪಡಿಸುವಿಕೆಯೊಡನೆ ಹೇಗೆ ನಿಭಾಯಿಸಿದನು ಎಂದು ನಾವು ನೋಡುವವರಾಗಿದ್ದೇವೆ. ಜೀವಕರವಾದ ರೊಟ್ಟಿಯ ಮೇಲಿನ ಪ್ರಸಂಗದ ನಂತರ

"ಆತನ ಶಿಷ್ಯರಲ್ಲಿ ಅನೇಕರು ಹಿಂಜರಿದರು" (ಯೋಹಾನ 6:66; KJV) ಎಂಬುದು ನಿಮಗೆ ನೆನಪಿರಬಹುದು. ಆ ಕ್ಷಣದಿಂದ, ಕ್ರಿಸ್ತನು ತಾನು ಇನ್ನು ಮುಂದೆ ಅವರ ಜೊತೆ ಇಲ್ಲದೇ ಇರುವುದರಿಂದ ಆ ಹನ್ನೆರಡು ಜನರನ್ನು ಸಿದ್ಧಮಾಡುವ ಕಾರ್ಯದೆಡೆಗೆ ಹೆಚ್ಚಾಗಿ ಲಕ್ಷವಹಿಸಿದನು. ನಿಮಗೆ ಕೊಡಲ್ಪಟ್ಟ ಓದುವಿಕೆಯನ್ನು ನೀವು ಮಾಡಿದ್ದಾದರೆ, ಕರ್ತನು ಗಲಿಲಾಯದಿಂದ ತಿರುಗಿ ಹೊರಕ್ಕೆ ಹೋಗುವುದನ್ನು ನೀವು ಕಂಡುಕೊಳ್ಳುವಿರಿ. ಇದಕ್ಕೆ ಒಂದು ಕಾರಣ ತನ್ನ ವೈರಿಗಳೊಂದಿಗೆ ಸಂಘರ್ಷವನ್ನು ತಪ್ಪಿಸುವುದಕ್ಕಾಗಿ, ಆದರೆ ಇನ್ನೊಂದು ಕಾರಣವೆಂದರೆ ತನ್ನ ಅಪೊಸ್ತಲರೊಡನೆ ಸಮಯವನ್ನು ಕಳೆಯುವುದಕ್ಕಾಗಿಯೇ. ಹೇಗೂ, ಯೇಸು ನಿರಂತರವಾಗಿ ಅಡ್ಡಿಪಡಿಸುವಿಕೆಯೆಂಬ ಉದ್ದೇಶವನ್ನು ತೆಗೆದುಹಾಕುವುದೇ ಆಗಿತ್ತು: ಆತನು ಮಿತ್ರರಿಂದ ಮತ್ತು ಶತೃಗಳಿಂದ ಇಬ್ಬರಿಂದಲೂ ಅಡ್ಡಿಪಡಿಸಲ್ಪಟ್ಟನು. ಈ ಪಾಠವು ಕ್ಲೇಶ ಪಡಿಸುವ ಅಡ್ಡಿಪಡಿಸುವಿಕೆಯೋ ಅಥವಾ ಪ್ರಯೋಜನಕಾರಿಯಾದ ವಿರಾಮಕ್ಕೆ ತಿರುಗಿಕೊಳ್ಳುವುದಕ್ಕಾಗಿ ಹೇಗೆ ಕಾರ್ಯನಿರ್ವಹಿಸಿದನು ಎಂಬುದರ ಬಗೆಗೆ ಇರುವುದಾಗಿದೆ.

## ಟೀಕೆಗಳ ಮೂಲಕ ಅಡ್ಡಿಪಡಿಸುವಿಕೆ

## (ಮತ್ತಾಯ 15:1-20; ಮಾರ್ಕ 7:1-23; ನೋಡಿರಿ ಯೋಹಾನ 6:4; 7:1)

ಐದು ಸಾವಿರ ಜನರಿಗೆ ಊಟಮಾಡಿಸುವುದರ ಬಗೆಗೆ ಯೋಹಾನನು ಹೇಳುವಾಗ ಆತನು "ಯೆಹೂದ್ಯರ ಪಸ್ಕಹಬ್ಬವು ಹತ್ತಿರವಾಗಿತ್ತು" ಎಂದು ಬರೆಯುತ್ತಾನೆ (ಯೋಹಾನ 6:4). ಒಂದು ವೇಳೆ ಅದು ಯೋಹಾನ 5:1ರಲ್ಲಿನ "ಯೆಹೂದ್ಯರ ಹಬ್ಬ"ವಾದ ಪಸ್ಕವಾಗಿದ್ದಾದರೆ, ಅದು ಒಂದನೆಯದು 6:4ರಲ್ಲಿ ಸೂಚಿತವಾದಂಥದ್ದು ಆಗಿದ್ದಾದರೆ ಅದು ಯೋಹಾನನ ಪುಸ್ತಕದಲ್ಲಿ ಇರುವಂಥ ಮೂರನೆಯ ಪಸ್ಕವಾಗಿದೆ.

ಅನೇಕ ಲೇಖಕರು (ಬಹುಶಃ ಹೆಚ್ಚಾಗಿ) ಯೇಸು 6:4ರಲ್ಲಿನ ಪಸ್ಕದಲ್ಲಿ ಭಾಗಿಯಾಗಲಿಲ್ಲ ಎಂದು ನಂಬುವವರಾಗಿದ್ದಾರೆ, ಪ್ರಮುಖವಾಗಿ ಯೋಹಾನ 7:1 ಕಾರಣದಿಂದಲೇ, ಅದು ಹೀಗೆ ಹೇಳುತ್ತದೆ. "ಈ ಸಂಗತಿಗಳಾದ ಮೇಲೆ ಯೇಸು ಗಲಿಲಾಯದಲ್ಲಿ ಸಂಚಾರಮಾಡುತ್ತಿದ್ದನು; ಯೆಹೂದ್ಯರು ಆತನನ್ನು ಕೊಲ್ಲುವ ಪ್ರಯತ್ನದಲ್ಲಿದ್ದುದರಿಂದ ಆತನಿಗೆ ಯೂದಾಯದಲ್ಲಿ ಸಂಚಾರಮಾಡುವ ಮನಸ್ಸಿರಲಿಲ್ಲ." ಯೇಸು ಆ ಹಬ್ಬದಲ್ಲಿ ಪಾಲ್ಗೊಂಡಿದ್ದೇ ಆದರೆ ಮತ್ತು ಆತನು ಹಾಗೆ ಮಾಡಿದನು ಎಂದು ವಾಲುವುದರತ್ತ ನಾನು ಯೋಚಿಸುತ್ತೇನೆ[2] - ಆತನು ಅದನ್ನು ಶಾಂತವಾಗಿ ಮತ್ತು ಯಾವುದೇ ಹೆಸರಿಲ್ಲದೆ ಮಾಡಿದನು[3] (ಯೋಹಾನ 7:10 ರೊಡನೆ ಹೋಲಿಸಿರಿ). ಪಸ್ಕಕ್ಕೆ ಸಂಬಂಧಿಸಿದಂತೆ ಯೆರೂಸಲೇಮಿನಲ್ಲಿ ಯಾವುದೇ ಘಟನೆಗಳು ನಡೆದ ಬಗ್ಗೆ ನಮಗೆ ಯಾವ ದಾಖಲೆಗಳು ಇಲ್ಲ.

ನಮ್ಮ ಸರಣಿಗೆ ಸಂಬಂಧಿಸಿದಂತೆ, ಪಸ್ಕದ ಮುಖ್ಯ ಉದ್ದೇಶದ ಆಧಾರವು ಯೋಹಾನ 6:4ರಲ್ಲಿ ಇದ್ದು ಇದು ಯೇಸುವಿನ ಜೀವಿತದ ಘಟನಾವಳಿಗಳ ಜೊತೆ ಇರಲು ನಮಗೆ ಸಹಾಯ ಮಾಡುವುದಾಗಿದೆ. ಪಸ್ಕದ ಸಮಯದಿಂದ ಸುಮಾರು ಆರು ತಿಂಗಳ ನಂತರದ ತನಕ, ಗಲಿಲಾಯದ ಶ್ರೇಷ್ಟ ಸೇವೆಯ ಅಂತಿಮಘಟ್ಟವನ್ನು ನಾವು ಹೊಂದಿದ್ದು,[4] ಆ ಹಂತವು ಆ ಪ್ರಾಂತದಿಂದ ಹೊರಗೆ ಬಂದ ಸರಣಿಗಳಿಂದ ಚಿತ್ರಿತವಾಗಿದೆ.

### ಕ್ಲೇಶಪಡಿಸುವ ಅಡ್ಡಿಪಡಿಸುವಿಕೆ

ನಮ್ಮ ಪಾಠವು ಪ್ರಾರಂಭವಾಗುತ್ತಿದ್ದಂತೆ, ಫರಿಸಾಯರ ಮತ್ತು ಶಾಸ್ತ್ರಿಗಳ ಗುಂಪು ಯೆರೂಸಲೇಮಿನಿಂದ[5] ಅಲ್ಲಿಗೆ ಬಂದಾಗ ಯೇಸು ಗಲಿಲಾಯದಲ್ಲಿ ಬೋಧಿಸುತ್ತಿದ್ದನು. ಕ್ರಿಸ್ತನನನ್ನು ಅಡ್ಡಿಪಡಿಸಲು ಅವರು ಹಿಂದೆ ಮುಂದೆ ಮಾಡಲಿಲ್ಲ. ಮಾರ್ಕ 7:1 ಹೇಳುವಂತೆ ಅವರು "ಆತನ ಬಳಿಗೆ ಕೂಡಿಬಂದರು." ಯೇಸುವನ್ನು ತಲುಪುವ ತನಕ ಅವರು ಜನಜಂಗುಳಿಯಿಂದ ದಾರಿಮಾಡಿಕೊಂಡು ತೋಳೆರಿಸಿಕೊಂಡು ಬರುವುದನ್ನು ಮತ್ತು ಆತನ

ಮುಖದ ಮೇಲೆ ಕೂಗಾಡುವುದನ್ನು ನಾನು ನೋಡಬಲ್ಲೆನು. ಈ ಸಮಯದಲ್ಲಿ, ಅವರಿಗೆ ಹೊಸದಾದ ಆರೋಪವು ಇತ್ತು; ಅದು ಆತನ ಶಿಷ್ಯರು ಕೈತೊಳಕೊಳ್ಳದೆ ಊಟಮಾಡುವ ಮೂಲಕ ಪುರಾತನವಾದ ಸಂಪ್ರದಾಯವನ್ನು ಮುರಿದಿದ್ದರು. ಆ ಸಂಪ್ರದಾಯಗಳು ಮೋಶೆಯ ಧರ್ಮಶಾಸ್ತ್ರದಂತೆಯೇ ಶ್ರೇಷ್ಟವಾದವುಗಳು ಎಂದು ಅವರು ಪರಿಗಣಿಸುವವರಾಗಿದ್ದರು.

**ಪ್ರಯೋಜನಕಾರಿಯಾದ ವಿರಾಮ**

ಮಾನವ ನಿರ್ಮಿತ ಸಂಪ್ರದಾಯಗಳ ಮೇಲೆ ಅವಶ್ಯವಾದ ಪಾಠವನ್ನು ಬೋಧಿಸಲು ಯೇಸುವು ಆ ಅವಕಾಶವನ್ನು ಬಳಸುವ ಮೂಲಕ ಕ್ಲೇಶಪಡಿಸುವ ಅಡ್ಡಿಪಡಿಸುವಿಕೆಯನ್ನು ಪ್ರಯೋಜನಕಾರಿಯಾದ ವಿರಾಮವನ್ನಾಗಿ ಪರಿವರ್ತಿಸಿದನು. ದೈವ ಪ್ರೇರಿತವಲ್ಲದ ಸಂಪ್ರದಾಯಗಳ ಆಪಾಯಕ್ಕೆ ಸಂಬಂಧಿಸಿದಂತೆ ಅವರಿಗೊಂದು ಗಭೀರವಾದ ಎಚ್ಚರಿಕೆಯನ್ನು ಕೊಡುವ ಮೂಲಕ ಮೊದಲು ಆತನು ತನ್ನನ್ನು ಹಿಯಾಳಿಸುವವರನ್ನು ಉದ್ದೇಶಿಸಿ ಮಾತನಾಡಿದನು. ಅಂಥ ಸಂಪ್ರದಾಯಗಳು "ಮನುಷ್ಯ ಕಲ್ಪಿತ"ವೇ (ಮಾರ್ಕ 7:7), ಹೊರತು ದೇವರಿಂದ ಬಂದಿಲ್ಲವೆಂದು ಒತ್ತಿಹೇಳಿದನು. "[ಅವರ] ಸಂಪ್ರದಾಯದ ನಿಮಿತ್ತ ದೇವರ ಆಜ್ಞೆಯನ್ನು" ಫರಿಸಾಯರ ಉಲ್ಲಂಘಿಸುವಿಕೆಯನ್ನು ಆತನು ಗದರಿಸಿದನು (ಮತ್ತಾಯ 15:3). ಅದನ್ನು ಆತನು ಪುರಾತನ ಕಾಲದಲ್ಲಿ ಮಾನವನು ಮಾಡಿದ ಒಂದು ಸಂಪ್ರದಾಯದ ಬಗೆಗೆ ಹೇಳುತ್ತಾ ಅಲ್ಲಿ ಮನುಷ್ಯರನ್ನು "ದೇವರಿಗೆ ಸಮರ್ಪಿಸಲು" ಹೇಳುವಂತದ್ದ ಆಗಿದೆ (ನೋಡಿರಿ ಮಾರ್ಕ 7:11; ಮತ್ತಾಯ 15:5). ಅಂದರೆ ಅವರ ಹಣದ ಎಲ್ಲವೂ ಅಥವಾ ಒಂದು ಭಾಗ ಇರುವುದಾಗಿದೆ, ಹೀಗಿರುವಾಗ ಅವರ ವಯಸ್ಸಾದ, ಅವಶ್ಯಕತೆಯುಳ್ಳ ಪೋಷಕರಿಗೆ ಅವರು ಹೀಗೆ ಹೇಳಬೇಕು "ನಮಗೆ ಬಲು ಖೇದವೆನ್ನಿಸುತ್ತದೆ, ಆದರೆ ಆ ಹಣವನ್ನು ನಿಮಗೆ ಸಹಾಯಿಸಲು ನಾವು ಬಳಸಲು ನಮಗೆ ಅಪ್ಪಣೆಯಿಲ್ಲ" ಎಂದು ಹೇಳುವಂತ ಉದಾಹರಣೆಯನ್ನು ಉದಾಹರಿಸಿದನು.[6]

ಆತನು ಗುಂಪಿನೆಡೆಗೆ ತಿರುಗಿದನು. ಕೈತೊಳಕೊಳ್ಳುವ ಬಗೆಗೆ ಇರುವವುಗಳು ಹಳೆಯದಾದ ಮತ್ತು ಪೊಳ್ಳಾದ ಸಂಪ್ರದಾಯಗಳು ಆಗಿದ್ದು ಮೂಲ ತತ್ವವು ಕೆಟ್ಟತನದಿಂದ ಕೂಡಿತ್ತು ಇದಕ್ಕೆ ತಕ್ಕ ಹಾಗೆ: "ಬಾಯೊಳಕ್ಕೆ ಹೋಗುವಂಥದ್ದು ಮನುಷ್ಯನನ್ನು ಹೊಲೆಮಾಡುವುದಿಲ್ಲ [ಅದು ಮನುಷ್ಯನ ಮಾತಾಗಿದೆ]" ಎಂದು ಆತನು ಹೇಳಿದನು (ಮತ್ತಾಯ 15:11). ಆ ಸಂಗತಿಯು ಯೋಗ್ಯವಾದದ್ದಲ್ಲವೆಂದು ಅರಿತುಕೊಂಡರೂ, ಅದರ ಬದಲಾಗಿ ಸಂಸ್ಕಾರಗಳ ತೇಜೋವಧೆಯು ಆದಾಗಿತ್ತು. ನಂತರದಲ್ಲಿ ಪೇತ್ರನು ವಿವರಣೆಗಾಗಿ ಕೇಳಿದನು ಮತ್ತು ಕ್ರಿಸ್ತನು ಅದಕ್ಕೆ ಹೀಗೆ ಉತ್ತರಿಸಿದನು:

> ಬಾಯೊಳಕ್ಕೆ ಹೋಗುವಂಥದ್ದು ಹೊಟ್ಟೆಯಲ್ಲಿ ಸೇರಿ ಬಹಿರ್ದೆಶೆಗೆ ಹೋಗುತ್ತದೆಂದು ನಿಮಗೆ ತಿಳಿಯಲಿಲ್ಲವೋ? ಆದರೆ ಬಾಯೊಳಗಿಂದ ಹೊರಡುವಂಥವುಗಳು ಮನಸ್ಸಿನೊಳಗಿಂದ ಬರುತ್ತದೆ; ಇವೆ ಮನುಷ್ಯನನ್ನು ಹೊಲೆಮಾಡುವವು. ಹೇಗೆಂದರೆ ಮನಸ್ಸಿನೊಳಗಿಂದ ಕೆಟ್ಟ ಆಲೋಚನೆ, ಕೊಲೆ ಹಾದರ ಸೋಳೆಗಾರಿಕೆ ಕಳ್ಳತನ ಸುಳ್ಳುಸಾಕ್ಷಿ ಬೈಗುಳಗಳು ಹೊರಟು ಬರುತ್ತವೆ. ಮನುಷ್ಯನನ್ನು ಕೆಡಿಸುವಂಥವುಗಳು ಇವೆ; ಆದರೆ ಕೈತೊಳಕೊಳ್ಳದೆ ಊಟಮಾಡುವದು ಮನುಷ್ಯನನ್ನು ಕೆಡಿಸುವುದಿಲ್ಲ ಅಂದನು (ಮತ್ತಾಯ 15:17-20).

ಯೇಸು ಕೊನೆಯಲ್ಲಿ ತನ್ನ ಶಿಷ್ಯರೊಡನೆ ಏಕಾಂತವಾಗಿರುವಾಗ, ಆತನು ಅವರಿಗೆ ಕಲಿಸಿದನು. ಪರಿಸಾಯರ ವಿಷಯವಾಗಿ ಆತನು ಅವರನ್ನು ಎಚ್ಚರಿಸಿದನು.[7] ಆತನು ಫರಿಸಾಯರ ಬೋಧನೆಯನ್ನು ದೇವರಿಂದ ಕಿತ್ತುಹಾಕಲ್ಪಡುವ ಕಳೆಗೆ ಹೋಲಿಸಿದನು (ಮತ್ತಾಯ 15:13). ಈ ಧಾರ್ಮಿಕ ನಾಯಕರನ್ನು ಕುರುಡರಿಗೆ ಮಾರ್ಗತೋರಿಸುವ

ಕುರಡರಿಗೆ[8] (ಯಾವುದೇ ಪ್ರಶ್ನೆಯಿಲ್ಲದೆ ಅವರ ಬೋಧನೆಗಳನ್ನು ಅನುಸರಿಸುವವರ)[9] ಸೂಚಿಸಿದನು. ಇವರಿಗೆ ಪಾಠಗಳ - ಒಂದು ಅಡ್ಡಿಪಡಿಸುವಿಕೆಯಿಂದ ಪ್ರೇರಿತವಾದ ಅವಶ್ಯಕತೆಯು ಇತ್ತು.

ಕರ್ತನಿಗಾಗಿ ಏನಾದರೂ ಮಾಡಬೇಕೆಂದು ನೀವು ಪ್ರಯತ್ನಿಸಿದ್ದಾದರೆ, ನೀವು ಟೀಕಿಸಲ್ಪಡುವ ಬಲವಾದ ಸಾಧ್ಯತೆಯು ಅಲ್ಲಿದೆ. ಟೀಕೆಯನ್ನು ನಿರ್ಲಕ್ಷಿಸುವ ಒಂದೇ ಒಂದು ಮಾರ್ಗವೆಂದರೆ ಏನನ್ನು ಮಾಡದೆ ಇರುವದು ಮತ್ತು ಏನೂ ಇಲ್ಲದೆ ಇರುವುದು ಎಂದು ಕೆಲವರು ಹೇಳಿದ್ದಾರೆ. ನೀವು ನಿಮ್ಮ ಉತ್ತಮವಾದದ್ದನ್ನೇ ಮಾಡುತ್ತಿರುವಾಗ ಮತ್ತು ಅವುಗಳು ಟೀಕೆಗಳಿಂದ ಅಡ್ಡಿಪಡಿಸಲ್ಪಟ್ಟಾಗ, ನೀವು ವಿವಿಧ ರೀತಿಯಲ್ಲಿ ಪ್ರತಿಕ್ರಿಯಿಸಬಹುದು. ನಮ್ಮಲ್ಲಿ ಹೆಚ್ಚಾದವರು ನಿಮಗಾಗಿ ಮಾಡುವಂತೆ ನೀವು ದುಃಖಿತಕರಾಗಬಹುದು; ಕೆಲವರು ಮಾಡುತ್ತಿರುವಂತೆ ನೀವು ಶಾಂತರಾಗಿರಬಹುದು; ಅಥವಾ ಕ್ರಿಸ್ತನು ಮಾಡಿದ ಹಾಗೆ ಅದನ್ನು ಉತ್ತಮವಾಗಿಯೂ ಮಾಡಬಹುದು.

ನಿನ್ನ ಮಾರ್ಗದಲ್ಲಿ ಟೀಕೆಗಳು ಬಂದಾಗ, ಅದರಲ್ಲಿ ಏನಾದರೂ ಸತ್ಯಾಂಷವಿದೆಯೇ ಎಂದು ಮೊದಲು ನೋಡು (ನನ್ನ ಅನುಭವದಂತೆ, ಹಲವು ಹಾಗಿರುವದುಂಟು). ನಂತರ ಯಾವುದೇ ಒಳ್ಳೆಯ ಉದ್ದೇಶವನ್ನು ಕೊಡುವ ಉತ್ತರ ಅಥವಾ ವಿವರಣೆಯು ಇದೆಯೇ ಅಥವಾ ಇಲ್ಲವೋ ಎಂಬುದನ್ನು ಪರಿಗಣಿಸು. ಅಂತಿಮವಾಗಿ, ನಿನ್ನ ಕಾರ್ಯಕ್ಕೆ ಮರಳು, ಒಡೆಯನಿಗಾಗಿ ಉತ್ತಮವಾದದ್ದನ್ನು ಮಾಡುತ್ತಾ ಇರುವುದನ್ನು ಪರಿಗಣಿಸುವವನಾಗಿರು. ಈ ರೀತಿಯಲ್ಲಿ ನೀನು ಪ್ರತಿಕ್ರಯಿಸಿದ್ದಾದರೆ, ನಂತರ ನೀನು ಸಹ ಕ್ಲೇಶಪಡಿಸುವ ಅಡ್ಡಿಪಡಿಸುವಿಕೆಯನ್ನು ಪ್ರಯೋಜನಕಾರಿಯಾದ ವಿರಾಮವನ್ನಾಗಿ ಪರಿವರ್ತಿಸಬಹುದು.

## ಒಂದು ಕೂಗಿನಿಂದ ಅಡ್ಡಿಪಡಿಸುವಿಕೆ
## (ಮತ್ತಾಯ 15:21-28; ಮಾರ್ಕ 7:24-30)

ಆತನ ವೈರಿಗಳ ಜೊತೆಯ ಈ ಸಂಘರ್ಷದ ನಂತರ, ಯೇಸು "ಅಲ್ಲಿಂದ ಹೊರಟು ತೂರ್ ಸಿದೋನ್ ಪಟ್ಟಣಗಳ ಪ್ರಾಂತ್ಯಗಳಿಗೆ ಹೋದನು" (ಮತ್ತಾಯ 15:21) ಫರಿಸಾಯರಿಂದ ದೂರ ಉಳಿಯುವ ಒಂದು ಕಾರಣವು ನಮಗೆ ಈಗಾಗಲೇ ಸೂಚಿಸಲ್ಪಟ್ಟಿದೆ, ಆದರೆ ಕ್ರಿಸ್ತನ ಮೂಲ ಉದ್ದೇಶವು ಹನ್ನೆರಡು ಜನರೊಡನೆ ಏಕಾಂತವಾಗಿರುವದು ಸ್ಪಷ್ಟವಾಗಿತ್ತು.[10] ಆತನ ಶತ್ರುಗಳ ಬೆಳೆಯುತ್ತಿರುವ ವೈರತ್ವವು ಆತನ ಎದುರಾಳಿಗಳು ಆತನನ್ನು ಕೊಲ್ಲುವಾಗಿನ ದಿನವು ಬರುವುದಕ್ಕೆ ಮುಂಚೆ ತನ್ನ ಅಪೊಸ್ತಲರನ್ನು ಸಿದ್ಧಮಾಡುವದು ಕೂಡಾ ತುಂಬಾ ಹೆಚ್ಚಾಗಿ ಅವಶ್ಯಕವಾಗಿ ಕಂಡಿತು.

ನಾವು ತಿಳಿದಂತೆ, ಯೇಸು ಪರದೇಶಕ್ಕೆ ಕಾಲಿಟ್ಟಿದ್ದು ಇದು ಮೊದಲ ಸಾರಿ ಎನ್ನಬಹುದು. ತೂರ್ ಮತ್ತು ಸಿದೋನ ಪಟ್ಟಣಗಳು ಪ್ರಾಚೀನ ಫೋನಕದ ಕರಾವಳಿಯ ಪಟ್ಟಣಗಳು ಆಗಿದ್ದವು.[11] ಫೊಯನಿಕವು ಇಕ್ಕಾಟ್ಟಾದ ಉದ್ದವಾದ ಭೂಮಿಯಾಗಿದ್ದು ಮೆಡಿಟರೇನಿಯನ್ ಸಮುದ್ರದಿಂದ ಈಶಾನ್ಯ ಮೂಲೆಯಲ್ಲಿ ಗಲಿಲಾಯದ ವಾಯುವ್ಯ ದಿಕ್ಕಿನಲ್ಲಿಯೂ ಇರುವ ಪ್ರದೇಶವಾಗಿದೆ. ಕ್ರಿಸ್ತನ ದಿನಗಳಲ್ಲಿ, ಇದು ಸಿರಿಯಾದ ರೋಮಾ ಪ್ರಾಂತದ ಒಂದು ಭಾಗವಾಗಿತ್ತು.

### ಕ್ಲೇಶಪಡಿಸುವ ಅಡ್ಡಿಪಡಿಸುವಿಕೆ

ಯೇಸು "ತೂರ್ ಪ್ರಾಂತ್ಯಕ್ಕೆ" ಆಗಮಿಸಿದಾಗ, ಆತನು ತನ್ನ ಇರುವಿಕೆಯು ಯಾರಿಗೂ ತಿಳಿಯಬಾರದೆಂದು ಒಂದು "ಮನೆಯೊಳಕ್ಕೆ ಇಳಕೊಂಡನು" (ಮಾರ್ಕ 7:24). "ತೂರ್ ಸಿದೋನ್ ಪಟ್ಟಣಗಳ ಸುತ್ತಲೂ" ಕ್ರಿಸ್ತನ ಸೇವೆಯ ಸುದ್ದಿಯು ತಲುಪಿತ್ತು ಎಂದು ಹಿಂದಿನ ಪಾಠದಲ್ಲಿಯೇ ನಾವು ನೋಡಿದ್ದೇವೆ (ಮಾರ್ಕ 3:8). ಇದು ದೂರವಿರಲಿಲ್ಲ, ಆದ್ದರಿಂದ,

ಆತನ ಸಹಾಯಕ್ಕಾಗಿ ಎದುರುನೋಡುವ ಬೇರೆಯವರು ಅಡ್ಡಿಪಡಿಸುವ ಮೊದಲೇ ಇದಾಗಿತ್ತು: "ಕೂಡಲೇ ಒಬ್ಬ ಹೆಂಗಸು ಆತನ ಸುದ್ದಿಯನ್ನು ಕೇಳಿಬಂದು ಆತನ ಪಾದಕ್ಕೆ ಬಿದ್ದಳು. ಆಕೆಯ ಮಗಳಿಗೆ ದೆವ್ವಹಿಡಿದಿತ್ತು. ಆ ಹೆಂಗಸು ಅನ್ಯಮತದವಳು[12] ಸುರೋಫೋಯನಿಕ್ಯರವಳು ಆಗಿದ್ದಳು" (ಮಾರ್ಕ 7:25, 26). "ಸುರಫೊಯನಕ" ಎಂಬ ಪದವು ಫೊಯನಿಕ ಫ್ರಾಂತ್ಯದವರನ್ನು ಸಿರಿಯನ್ ಫ್ರಾಂತ್ಯದವರಿಂದ ಬೇರೆಮಾಡುವುದಾಗಿದೆ.

ಆ ಸ್ತ್ರೀಯು "ಸ್ವಾಮೀ, ದಾವೀದನ ಕುಮಾರನೇ, ನನ್ನನ್ನು ಕರುಣಿಸು" ಎಂದು ಕೂಗಿದಳು (ಮತ್ತಾಯ 15:22). "ದಾವೀದನ ಕುಮಾರ" ಈ ಪದವು ಇಸ್ರಾಯೇಲ್ಯರ ಮೆಸ್ಸೀಯನಿಗಾಗಿ ಬಳಸುವ ಪದವಾಗಿತ್ತು. ಯೆಹೂದ್ಯರ ನಿರೀಕ್ಷೆಯು ಅವರ ಸುತ್ತಲಿರುವ ಪ್ರಾಂತ್ಯಗಳಲ್ಲಿ ಕಂಡುಬರುವುದಾಗಿತ್ತು.[13] ಆಕೆಯು ಯೇಸುವಿಗೆ "ನನ್ನ ಮಗಳಿಗೆ ದೆವ್ವದ ಕಾಟವು ಬಹಳವಾಗಿದೆ" ಎಂದು ಹೇಳಿದಳು. "ಆಕೆಯು ತನ್ನ ಮಗಳ ದೆವ್ವವನ್ನು ಬಿಡಿಸಬೇಕೆಂದು ಆತನನ್ನು *ಬೇಡಿಕೊಂಡಳು*" ಎಂದು ಮಾರ್ಕನು ಅದನ್ನು ಒತ್ತಿಹೇಳಿದ್ದಾನೆ (ಮಾರ್ಕ 7:26; ಒತ್ತಿ ಹೇಳಿದ್ದು ನನ್ನದು). ಮತ್ತಾಯ ಆಕೆಯು ಕೂಗಿಕೊಂಡಳು (ಮತ್ತಾಯ 15:23). ಈಕೆಯು ಹಣವನ್ನು ಬೇಡದ, *ಗದ್ದಲದ* ತಾಯಿಯಾಗಿದ್ದಳು. ಆಕೆಯ ಚಿಕ್ಕ ಮಗಳಿಗೆ ಸಹಾಯವು ಬೇಕಿತ್ತು, ಮತ್ತು ಪ್ರತಿಯೊಬ್ಬರೂ ಅದನ್ನು ತಿಳಿಯಬೇಕೆಂದು ಅವಳು ಬಯಸಿದ್ದಳು. ಗಂಭೀರವಾದ ಕಾಯಿಲೆಯಿರುವ ಚಿಕ್ಕಮಗುವನ್ನು ನೀವು ಹೊಂದಿದ್ದಾದರೆ, ನೀವೂ ಕೂಡಾ ಅವಳಿಗೆ ಅಂಥಕರುಣೆ ತೋರಿಸುವಿರಿ.

**ಪ್ರಯೋಜನಕಾರಿಯಾದ ವಿರಾಮ**

ಯೇಸು ಮತ್ತು ಆ ಸ್ತ್ರೀಯ ನಡುವೆ ಆದ ಅಂತರ್ ಬದಲಾವಣೆಯು ಸುವಾರ್ತೆಯ ವಿವರಣೆಯಲ್ಲಿಯೇ ಬಲು ನಾಟಕೀಯವಾದದ್ದು ಮತ್ತು ಗಲಿಬಿಲಿಗೊಳಿಸುವಂತದ್ದು ಆಗಿದೆ. ಯೇಸು ಆ ಸ್ತ್ರೀಯನ್ನು ಉದ್ದೇಶಪೂರ್ವಕವಾಗಿ ಅವಮಾನಿಸುತ್ತಿದ್ದಾನೆ ಎಂದು ಮೇಲ್ನೋಟಕ್ಕೆ ಕಾಣಿಸುವುದಾಗಿದೆ. ಮೂಲತವಾಗಿ ಆತನು ಆಕೆಯನ್ನು ಅಲಕ್ಷಿಸಿದನು, ಮತ್ತು ಆತನ ಶಿಷ್ಯರು ಆಕೆಯನ್ನು ತೊಲಗಿಸಲು ಪ್ರಯತ್ನಿಸಿದರು[14] (ಮತ್ತಾಯ 15:23). ಅಂತಿಮವಾಗಿ ಆತನು ಆಕೆಯೊಡನೆ ಮಾತನಾಡಿದಾಗ, ಆತನು "ತಪ್ಪಿಸಿಕೊಂಡಿರುವ ಇಸ್ರಾಯೇಲನ ಮನೆತನದವರ ಬಳಿಗೆ ಹೊರತು ಮತ್ತಾರ ಬಳಿಗೂ ನಾನು ಕಳಿಸಲ್ಪಟ್ಟವನಲ್ಲ" ಎಂದು ಹೇಳಿದನು (ಮತ್ತಾಯ 15:24).

ದುಗುಡ ತುಂಬಿದ ಈ ತಾಯಿಯು ಅದಕ್ಕೆ ಎದೆಗುಂದಲಿಲ್ಲ. ಆಕೆಯು "ಸ್ವಾಮೀ ಅನುಗ್ರಹ ಮಾಡಬೇಕು!" ಎಂದು ಬೇಡಿಕೊಳ್ಳುವುದನ್ನು ಮುಂದುವರೆಸಿದಳು (ಮತ್ತಾಯ 15:25). "ಮಕ್ಕಳಿಗೆ ಮೊದಲು ತೃಪ್ತಿಯಾಗಲಿ;[15] ಮಕ್ಕಳು ತಿನ್ನುವ ರೊಟ್ಟಿಯನ್ನು ತಕ್ಕೊಂಡು ನಾಯಿಮರಿಗೆ ಹಾಕುವದು ಸರಿಯಲ್ಲ" ಎಂದು ಯೇಸು ಪ್ರತಿಕ್ರಿಯಿಸಿದನು (ಮಾರ್ಕ 7:27). ಈ ವಾಕ್ಯದಲ್ಲಿರುವ "ಮಕ್ಕಳು" ನಿಶ್ಚಿತವಾಗಿ ಯೆಹೂದಿಗಳೇ ಆಗಿದ್ದು ಇದು ಅನ್ಯಜನರನ್ನು "ನಾಯಿಗಳು" ಎಂದು ಹೇಳಿದೆ. ನೀನು ನಾಯಿ ಎಂದು ಹೇಗೆ ಕರೆಯಲು ಬಯಸುವೇ? ನಾನು ಆ ಸ್ತ್ರೀಯಾಗಿದ್ದಿದ್ದಾದರೆ, ನಾನು ಸಿಟ್ಟಿನಿಂದ ಆಕ್ರೋಷಿತಗೊಳ್ಳುದಕ್ಕೆ ಪ್ರೇರೇಪಿತನಾಗುತ್ತಿದ್ದೆ! ಅದರ ಬದಲಾಗಿ ಆಕೆಯು ಜಾಣತನದಿಂದ ಉತ್ತರಿಸಿದಳು, "ಸ್ವಾಮೀ ಆ ಮಾತು ನಿಜವೇ; ಮೇಜಿನ ಕೆಳಗಿರುವ ನಾಯಿಮರಿಗಳಂತೂ ಮಕ್ಕಳಕೈಯಿಂದ ಬೀಳುವ ರೊಟ್ಟಿಯ ತುಂಡುಗಳನ್ನು ತಿನ್ನುತ್ತವಲ್ಲಾ" (ಮಾರ್ಕ 7:27; ಮತ್ತಾಯ 15:27).

ಈ ಪ್ರಸಂಗವನ್ನು ನನ್ನ ಮನದಲ್ಲಿ ನಾನು ಚಿತ್ರಿಸಿಕೊಂಡಾಗ, "ಅಮ್ಮಾ ನಿನ್ನ ನಂಬಿಕೆ ಬಹಳ; ನಿನ್ನ ಮನಸಿನಂತೆ ಆಗಲಿ" ಎಂದು ಯೇಸವು ಹೇಳುವಾಗ ಯೇಸುವಿನ ಮುಖದ ಸುತ್ತಲೂ ಮುಗುಳ್ನಗೆಯು ಹರಡುವುದನ್ನು ನಾನು ನೋಡಬಲ್ಲೆ (ನೋಡಿ ಮತ್ತಾಯ 15:28; ಮಾರ್ಕ 7:29). "ಆಕೆಯ ಮಗಳು ಸ್ವಸ್ಥಳಾದಳು" ಎಂದು ಮತ್ತಾಯನು ಬರೆಯುತ್ತಾನೆ

(ಮತ್ತಾಯ 15:28). "ಆ ಹುಡುಗಿ ಹಾಸಿಗೆಯ ಮೇಲೆ ಮಲಗಿದ್ದಳು; ದೆವ್ವ ಅವಳನ್ನು ಬಿಟ್ಟು ಹೋಗಿತ್ತು" ಎಂದು ಮಾರ್ಕನು ಆಕೆಯು ಮನೆಗೆ ಹಿಂತಿರುಗಿ ಹೋದ ನಂತರದ್ದನ್ನು ದಾಖಲಿಸಿದ್ದಾನೆ (ಮಾರ್ಕ 7:30). ನನಗೆ ಈ ಕಥೆಯು ಬಲು ಇಷ್ಟ!

ಈ ಕಥೆಯು ನಾಟಕೀಯವಾಗಿದ್ದಾಗ್ಯೂ ಮತ್ತು ಆಕರ್ಷಕವಾಗಿದ್ದ ಹಾಗೆಯೇ, ಇದು ಇನ್ನೂ ಬೆರಳುಗೊಳಿಸುವಂಥದ್ದಾಗಿದೆ. ವಿಶ್ಲೇಷಣಕಾರರು ಯೇಸುವಿನಿಂದ ಬಳಿಕೆಯಾದ ಮಾತುಗಳನ್ನು ನಾವು ತಿಳಿದಂಥ ಆತನ ಗುಣಗಳು ಮತ್ತು ಆತನ ಉದ್ದೇಶಗಳ ಜೊತೆ ಸರಿ ಹೊಂದಿಸುವುದಕ್ಕೆ ಕಷ್ಟಪಟ್ಟಿದ್ದಾರೆ. ಕ್ರಿಸ್ತನ ಮಾತುಗಳನ್ನು ಮುಖಬೆಲೆಯಲ್ಲಿ ತೆಗೆದುಕೊಳ್ಳಲಾಗುವದು ಎಂದು ಕೆಲವರು ಸೂಚಿಸುವವರಾಗಿದ್ದಾರೆ. ಆತನು ನಿಜವಾಗಿಯೂ ತಪ್ಪಿಸಿಕೊಂಡಿರುವ ಇಸ್ರಾಯೇಲ್ಯನ ಮನೆತನದವರ ಬಳಿಗೇ ಕಳಿಸಲ್ಪಟ್ಟವನಾಗಿದ್ದನು (ಮತ್ತಾಯ 10:6). ನಂತರದಲ್ಲಿ "ಈ ಹಟ್ಟಿಗೆ ಸೇರಿದ ಬೇರೆ ಕುರಿಗಳು ..." (ಅದು ಅನ್ಯ ಜನರು) ಎಂದು ಕರೆಯಲ್ಪಟ್ಟವರು ಯೆಹೂದಿಗಳು ಮತ್ತು ಅನ್ಯರು ಒಳ್ಳೆಯ ಕುರುಬನು ನೋಡಿಕೊಳ್ಳುವಿಕೆಯಲ್ಲಿ "ಒಂದೇ ಹಿಂಡು" ಆಗುವದು (ಯೋಹಾನ 10:16).[16] ಅದೇ ಸಮಯದಲ್ಲಿ (ಈ ವಿಶ್ಲೇಷಣಕಾರರು ಒತ್ತಿ ಹೇಳುವಂತೆ). ತನ್ನ ಮೂಲ ಉದ್ದೇಶದಿಂದ ಹಿಂದೆ ಸರಿಯಬಾರದೆಂದು ಯೇಸು ಯೋಚಿಸಿದ್ದನು (ಮತ್ತಾಯ 10:5). ಆ ಉದ್ದೇಶದ ಮೇಲಿನ ಆತನ ದೃಷ್ಟಿಯು ಕ್ರಿಸ್ತನ ಮೂಲ ಪ್ರತಿಕ್ರಿಯೆಯ ಮೇಲಿನ ಅಂಶವಾಗಿತ್ತು[17] ಆದರೆ ಅದು ಖಚಿತ ವಾಗಿ ಸಂಪೂರ್ಣವಾದ ವಿವರಣೆಯು ಅಲ್ಲ. ಯೇಸು ಈ ಹಿಂದೆಯೇ ಅನ್ಯಜನರ ಸಹಾಯದ ಕೂಗಿಗೆ ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದ್ದನು (ಮತ್ತಾಯ 8:5-13). ಮುಂದೆ, ಆತನು ತೂರ್ ಪ್ರದೇಶವನ್ನು ಬಿಟ್ಟ ನಂತರ, ಆತನು ಅನೇಕ ಅನ್ಯರನ್ನು ವಾಸಿಮಾಡಿರಬಹುದು.[18]

ಅದನ್ನು ನಾನು ಹೆಚ್ಚಾಗಿ ಒತ್ತಿಹೇಳಬಾರದು, ನಾವು ತಿಳಿದಂತೆ ಯೇಸು ಏನನ್ನು ಮಾತನಾಡಿದನೋ ಅದನ್ನೇ ಮಾಡಿದನು, ಅನ್ಯರ ವಿರುದ್ಧದ ಪೂರ್ವಾಗ್ರಹವನ್ನು ನಾವು ಬಿಟ್ಟುಬಿಡಬೇಕು. ಸಾಮಾನ್ಯವಾಗಿ ಇತರ ಜನಾಂಗದ ವಿರುದ್ಧ ಇರುವ ಯೆಹೂದಿಗಳ ತಾರತಮ್ಯವು ಯೇಸುವನ್ನು ವಿಚಲಿತಗೊಳಿಸಲಿಲ್ಲ (ನೋಡಿರಿ ಲೂಕ 2:32; ಮತ್ತಾಯ 8:10-12; 12:18, 21).

ಕ್ರಿಸ್ತನು ಸ್ತ್ರೀಯನ್ನು ಹೇಗೆ ಆಜ್ಞಾಪಿಸಿ ಮಾತನಾಡಿದನು ಎಂಬ ಮಾತುಗಳನ್ನು ನಾವರಿದಂತಹ ವಾಸ್ತವವನ್ನು ಇತರರು ಒತ್ತಿ ಹೇಳುವವರಾಗಿದ್ದಾರೆ. ತಾನು ಯಾವ ವ್ಯಕ್ತಿಯ ಜೊತೆ ಮಾತನಾಡುತ್ತಿದ್ದನೋ ಆ ವ್ಯಕ್ತಿಯ ಗುಣವನ್ನು ಯೇಸು ಅರಿತುಕೊಂಡಿರುತ್ತಿದ್ದನು ಎಂದು ಅವರು ನಮಗೆ ಅದನ್ನು ನೆನಪಿಸಿಕೊಡುವವರಾಗಿದ್ದಾರೆ.[19] ಆದ್ದರಿಂದ ಕರ್ತನು ಮತ್ತು ಆ ಸ್ತ್ರೀಯ ಮಧ್ಯದ ಸಂಭಾಷಣೆಯು ಉದ್ದೇಶಪೂರ್ವಕವಾಗಿದುದ್ದೂ ಸುಮಧುರವಾ ಗಿದ್ದು ಚುರುಕು ಮನಸ್ಸಿನ ಮತ್ತು ಹಾಸ್ಯಮಯದಿಂದ ಕೂಡಿದೆ ಎಂದು ಅವರು ಸೂಚಿಸುವವ ರಾಗಿದ್ದಾರೆ. ಯೇಸು ತನ್ನ ಕಣ್ಣಲ್ಲಿ ಹೊಳಪನ್ನು ಇರಿಸಿಕೊಂಡು ಮಾತನಾಡುವುದನ್ನು ಊಹಿಸಿಕೊಳ್ಳುವುದಕ್ಕೆ ನನಗೆ ಯಾವ ಸಮಸ್ಯೆಯೂ ಇಲ್ಲ.

ಸಂಭಾಷಣೆಯ ಕೊನೆಯಲ್ಲಿ ಆತನ ಮುಖದ ಮೇಲೆ ಆತನು ಮುಗುಳ್ನಗೆಯನ್ನು ಹೊಂದಿರಲೇಬೇಕು. ಕಥೆಗಿಂತ ಇನ್ನೂ ಹೆಚ್ಚಾದದ್ದು ಅಲ್ಲಿರುವುದಾಗಿದೆ. ಆ ಸ್ತ್ರೀಯ ವಿನಂತಿಗೆ ಕ್ರಿಸ್ತನ ಪ್ರತಿಕ್ರಿಯೆಯ ಇನ್ನೊಂದು ಸಾಧ್ಯತೆಯನ್ನು ನಾನು ಇಡುವವನಾಗಿದ್ದೇನೆ. ಕಥೆಯ ಕೊನೆಯಲ್ಲಿ, ಯೇಸು ಆ ಚಿಕ್ಕ ಹುಡುಗಿಯನ್ನು ವಾಸಿಮಾಡಿದುದರಿಂದ ಇದರೊಂದಿಗೆ ಆತನು ಎಲ್ಲರ ಜೊತೆಗೆ ಇರುವವನು ಎಂದು ತಿಳಿಸುವ ಉದ್ದೇಶವಾಗಿತ್ತು ಎಂದು ನಾನು ನಂಬುವವನಾಗಿದ್ದೇನೆ. ಮುಂದೆ, ಕಥೆಯ ಮುಕ್ತಾಯದಲ್ಲಿ ಯೇಸು ಆ ತಾಯಿಯ ನಂಬಿಕೆಯತ್ತ: "ಅಮ್ಮಾ ನಿನ್ನ ನಂಬಿಕೆಯು ಬಹಳ" (ಮತ್ತಾಯ 15:28) ಎಂಬ ಮೆಚ್ಚಿಕೆಯು ಆತನ ಮಾತುಗಳು ಆತನ ಉದ್ದೇಶಕ್ಕೆ ಸಂಬಂಧಿಸಿರುವಂತೆ ಕಂಡುಬರುವದು ಆಗಿದೆ. B. S. Dean ರವರು ಹೀಗೆ ಬರೆಯುತ್ತಾರೆ. "ಆಕೆಯ ನಂಬಿಕೆಯು ಬಲು ನಮ್ರವಾಗಿತ್ತು. ಜಯಿಸಲು

ಸಾಧ್ಯವಾದುದ್ದು ಆಗಿತ್ತು, ಫರಿಸಾಯರ ಕಪಟತನ ಮತ್ತು ಗಲಿಲಾಯದವರ ಚಂಚಲತೆಯ ನಂತರ ಇದು ಪುನಃ ನವೀಕರಣವನ್ನು ತರುವಂತದ್ದಾಗಿತ್ತು."[20] ವ್ಯಕ್ತಿಗತ ನಂಬಿಕೆಯ ಬಗ್ಗೆ ಎರಡು ಸಾರಿ ಮಾತ್ರ ಯೇಸು ಈ ರೀತಿಯ ಮೆಚ್ಚಿಗೆಯನ್ನು ವ್ಯಕ್ತಪಡಿಸಿದ್ದಾನೆ ಮತ್ತು ಆ ಇಬ್ಬರೂ ವ್ಯಕ್ತಿಗಳು ಅನ್ಯಜನರೆ ಆಗಿದ್ದಾರೆ: ಸುರೆಫೊಯನಿಕದ ಸ್ತ್ರೀ ಮತ್ತು ರೋಮಾದ ಶತಾಧಿಪತಿ (ಮತ್ತಾಯ 8:10; ಲೂಕ 7:9).

ಇನ್ನೊಂದು ಮಾತಿನಲ್ಲಿ, ಬಿರುಸಾದ ಮಾತುಗಳ ಮೂಲಕ ಆ ಸ್ತ್ರೀಯ ನಂಬಿಕೆಯ ಆಳವನ್ನು ತನ್ನ ಶಿಷ್ಯರಿಗೆ ಪ್ರಾಯೋಗಿಕವಾಗಿ ತೋರಿಸುವುದೇ ಯೇಸುವಿನ ಒಂದು ಉದ್ದೇಶವು ಆಗಿತ್ತು ಎಂದು ಕಂಡುಬರುತ್ತದೆ. ಕರ್ತನು ಆಕೆಯ ಹೃದಯವನ್ನು ಅರಿತಿದ್ದನು (ಯೋಹಾನ 2:25) ಮತ್ತು ಅದರಂತೆ ಆಕೆಯ ನಂಬಿಕೆಯನ್ನೂ ಎಂಬುದನ್ನು ಗಮನದಲ್ಲಿ ಇಟ್ಟುಕೊಳ್ಳಿರಿ. ಮುಂದೆ ಈ ತರದ ನಂಬಿಕೆ ಅವಶ್ಯವಿರುವುದರಿಂದ ಈ ಸಂದರ್ಭವನ್ನು ಅಪೊಸ್ತಲರಿಗಾಗಿ ಪಾಠದ ವಿಷಯವಾಗಿ ಉಪಯೋಗಿಸಿಕೊಳ್ಳುವ ಮೂಲಕ ಯೇಸು ಕ್ಲೇಶ ಪಡಿಸುವ ಅಡ್ಡಿಪಡಿಸುವಿಕೆಯಿಂದ ಪ್ರಯೋಜನಕಾರಿಯಾದ ವಿರಾಮದತ್ತ ತಿರುಗಿಕೊಂಡನ ಎಂಬ ಸಾಧ್ಯತೆಯನ್ನೂ ಸಹ ಪರಿಗಣಿಸಿರಿ.[21] ಸಂಕಷ್ಟಗಳು ಅಪೊಸ್ತಲರಿಗಾಗಿ ಮುಂದೆ ಕಾದುಕೊಂಡಿರುವುದನ್ನು ಆತನು ತಿಳಿದಿದ್ದನು (ಮತ್ತಾಯ 10:17, 18, 21, 22, 24, 25). ಅವರು ವಿಜಯಶಾಲಿಗಳಾಗುವ ಒಂದೇ ಮಾರ್ಗವೆಂದರೆ ಆ ಸ್ತ್ರೀಯು ಹೊಂದಿದಂತಹ ನಂಬಿಕೆಯನ್ನು ಹೊಂದಿರುವುದು; ನಿರಾಶೆ ಮತ್ತು ಎದೆಗುಂದುವಿಕೆಯನ್ನು ತಿರಸ್ಕರಿಸುವಂಥದ್ದೇ ಆಗಿತ್ತು (1 ಯೋಹಾನ 5:4). ನಮ್ಮಲ್ಲಿ ಪ್ರತಿಯೊಬ್ಬರಿಗೂ ಈ ಪಾಠದ ಅವಶ್ಯಕತೆಯು ಇದೆ.

ಒಂದು ಸಂದರ್ಭದಲ್ಲಿ, ಚಿಕ್ಕದಾದ ಅಥವಾ ನೀನು ಮಾಡುತ್ತಿರುವುದಕ್ಕೆ ಸಂಬಂಧಿಸದೆ ಇರುವಂಥ ಸಹಾಯಕ್ಕಾಗಿನ ಕರೆಯು ನಿನ್ನನ್ನು ಅಡ್ಡಿಪಡಿಸಿದಾಗ ನೀನು ಒಂದು ಯೋಗ್ಯ ಕಾರಣದಲ್ಲಿ ತಲ್ಲಿನನಾಗಿರಬಹುದು. ಅದು ಸಂಭವಿಸಿದಾಗ, ಆ ಅಡ್ಡಿಪಡಿಸುವಿಕೆಯನ್ನು ನೀನು ಹೇಗೆ ತೆಗೆದುಕೊಳ್ಳುತ್ತಿ ಎಂಬುದನ್ನು ಪರಿಗಣಿಸು ಮತ್ತು ಸಕಾರಾತ್ಮಕ ರೀತಿಯಲ್ಲಿ ಅದನ್ನು ಉಪಯೋಗಿಸು. ಈ ಹಿಂದೆ ಸೂಚಿಸಲಾಗಿರುವಂತೆ, ಅಂತ್ಯದ ಪರಿಣಾಮವು ನೀನು ಮೂಲತಃಹವಾಗಿ ಯೋಜಿಸಿದ್ದಕ್ಕಿಂತಲೂ ಹೆಚ್ಚಿನ ಮಹಿಮೆಯನ್ನು ಕರ್ತನಿಗೆ ತರಬಹುದಾಗಿದೆ.

## ಜನಜಂಗುಳಿಯಿಂದ ಅಡ್ಡಿಪಡಿಸುವಿಕೆ

## (ಮತ್ತಾಯ 15:29-31; ಮಾರ್ಕ 7:31-37)

ಯೇಸು ಮತ್ತು ಆತನ ಶಿಷ್ಯರು ಅಂತಿಮವಾಗಿ, ತೂರ್ ಪ್ರಾಂತ್ಯವನ್ನು ಬಿಟ್ಟರು, ನಂತರ ಅವರು ತಕ್ಷಣವೆ ಗಲಿಲಾಯಕ್ಕೆ ಮರಳಲಿಲ್ಲ. ಬದಲಾಗಿ, ಹೆರೋದನ ರಾಜ್ಯದಿಂದ ದೂರವಿರುತ್ತಾ,[22] ಅವರು ಉತ್ತರದ ಸೀದೋನಿನತ್ತ, ನಂತರ ಬೆಟ್ಟಗಳನ್ನು ದಾಟಿ ಮತ್ತು ಯೊರ್ದಾನ ನದಿಯ ಮೂಲಗಳನ್ನು ದಾಟಿ ಮತ್ತು ಅಂತಿಮವಾಗಿ ದಕ್ಷಿಣದೊಡನೆ ಪೂರ್ವದ ಗಲಿಲಾಯ ಸಮುದ್ರದ ತೀರದ ಅಡವಿಯವರೆಗೆ ಸಾಗುತ್ತ (ಮಾರ್ಕ 8:4) ದೆಕೊಪೋಲಿಯ ಪ್ರಾಂತ್ಯದಲ್ಲಿ ನಡೆದರು (ಮಾರ್ಕ 7:31).[23]

### ಒಂದು ಕ್ಲೇಶಪಡಿಸುವ ಅಡ್ಡಿಪಡಿಸುವಿಕೆ

ಕರ್ತನು ತಾನು ಸೇರಬೇಕಾದ ಸ್ಥಳಕ್ಕೆ ಬಂದಾಗ, ಆತನು ಬೆಟ್ಟವನ್ನು ಹತ್ತಿ ಅಲ್ಲಿಯೇ ಕೂತುಕೊಂಡನು (ಮತ್ತಾಯ 15:29), ಅದು ತನ್ನ ಶಿಷ್ಯರಿಗೆ ಬೋಧಿಸಲು ಎಂಬುದರಲ್ಲಿ ಯಾವುದೇ ಸಂಶಯವಿಲ್ಲ.[24] ತಿರುಗೊಂದಾವರ್ತಿ ಆತನು ಅಡ್ಡಿಪಡಿಸಲ್ಪಟ್ಟನು: "ಆಗ ಜನರು ಗುಂಪುಗುಂಪಾಗಿ ಆತನ ಬಳಿಗೆ ಬಂದು ಕುಂಟರು ಕುರುಡರು ಮೂಖರು ಕೈಕಾಲಿಲ್ಲದವರು

ಈ ಮುಂತಾದ ಅನೇಕರನ್ನು ಕರೆತಂದು ಆತನ ಪಾದಗಳ ಬಳಿಯಲ್ಲಿ ಬಿಟ್ಟರು;[25] ಆತನು ಅವರನ್ನು ವಾಸಿಮಾಡಿದನು" (ಮತ್ತಾಯ 15:30).

ಯೇಸು ಎರಡು ದೆವ್ವಗಳಿಂದ ವಾಸಿಮಾಡಿದಂತ ಮತ್ತು ತಮ್ಮ ಸೀಮೆಯನ್ನು ಬಿಟ್ಟುಹೋಗ ಬೇಕೆಂದು ಆತನಿಗೆ ಕೇಳಿದಂತ ಸ್ಥಳವೇ ಆದಾಗಿತ್ತು (ಮಾರ್ಕ 5:17). ಕ್ರಿಸ್ತನು ವಾಸಿಯಾದ ಒಬ್ಬ ಮನುಷ್ಯನಿಗೆ ಕರ್ತನು ಎಂಥ ಕರುಣೆಯನ್ನು ಅವನ ಮೇಲೆ ತೋರಿಸಿದನೆಂಬುದನ್ನು ಹಂಚಿಕೊಳ್ಳುವಂತೆ ಸೂಚಿಸಿದನು (ಮಾರ್ಕ 5:19). ತಕ್ಷಣವೇ, ಆ ಮನುಷ್ಯನು "ಯೇಸು ತನಗೆ ಮಾಡಿದ ಉಪಕಾರಗಳನ್ನು ದೆಕಪೋಲಿ ಎಂಬ ಸೀಮೆಯಲ್ಲಿ ಸಾರುವುದಕ್ಕೆ ಆರಂಭಿಸಿದನು; ಎಲ್ಲರೂ ಆಶ್ಚರ್ಯಪಟ್ಟರು" (ಮಾರ್ಕ 5:20). ಆ ಮನುಷ್ಯನ ಸಂದೇಶದಲ್ಲಿನ ಪ್ರಭಾವವು ಸಾವಿರಾರು ಜನರಲ್ಲಿ ಕಂಡುಬಂದಿತು (ಮಾರ್ಕ 8:9). ಅದು ಈಗ ಆ ಆದೇಶದಲ್ಲೆಲ್ಲಾ ಸಹಾಯವಾಗಿ ಕಂಡುಬರುತ್ತಿದೆ (ಮಾರ್ಕ 8:3). ಹಿಂದೆ, ಆ ಪ್ರದೇಶದ ಜನರು "ಹೊರಗೆ ಹೋಗಲು" ಹೇಳಿದ್ದರು! ಈಗ ಅದೇ ಜನರು "ನಮಗೆ ಸಹಾಯ ಮಾಡು" ಎಂದು ಬೇಡುತ್ತಿದ್ದಾರೆ![26]

**ಪ್ರಯೋಜನಕಾರಿಯಾದ ವಿರಾಮ**

ಈ ಎಲ್ಲಾ ನಿರಂತರವಾದ ಅಡ್ಡಿಪಡಿಸುವಿಕೆಗಳಿಂದ ಕ್ರಿಸ್ತನು ಹತಾಶನಾಗಿದ್ದಾದರೂ, ಆತನು ಅದನ್ನು ತೋರಿಸಲಿಲ್ಲ. ಈ ಸಂದರ್ಭದಲ್ಲಿ, ಆತನು ಆ ದೊಡ್ಡ ಅನ್ಯ ವೀಕ್ಷಕರ[27] ಹೃದಯವನ್ನು ನಿಜವಾದ ಮತ್ತು ಜೀವಿಸುವ ದೇವರೆಡೆಗೆ ತಿರುಗಿಸುವ ಅಂಶವಾಗಿ ಈ ಅಡ್ಡಿಪಡಿಸುವಿಕೆಯನ್ನು ಅವಕಾಶವನ್ನಾಗಿ ಪರಿವರ್ತಿಸಿಕೊಂಡನು: "... ಆತನು ಅವರನ್ನು ವಾಸಿಮಾಡಿದನು. ಮೂಖರಾಗಿದ್ದವರು ಮಾತನಾಡಿದ್ದನ್ನೂ, ಕೈಕಾಲಿಲ್ಲದವರು ಸ್ವಸ್ಥವಾದದ್ದನ್ನು ಕುಂಟರಿಗೆ ಕಾಲುಬಂದದ್ದನ್ನೂ[28] ಕಂಡು ಆಶ್ಚರ್ಯಪಟ್ಟ ಇಸ್ರಾಯೇಲ್ ಜನರ ದೇವರನ್ನು ಕೊಂಡಾಡಿದರು"[29] (ಮತ್ತಾಯ 15:30, 31). "ತೊದಲು ಮಾತನಾಡುವ ಒಬ್ಬ ಕಿವುಡನು"[30] ಸ್ವಸ್ಥವಾದಂಥ ನಿರ್ದಿಷ್ಟ ಘಟನೆಯನ್ನು ಮಾರ್ಕನು ದಾಖಲಿಸಿದ್ದಾನೆ (ಮಾರ್ಕ 7:32).

> ಆತನು ಅವನನ್ನು ಜನರ ಗುಂಪಿನಿಂದ ಒತ್ತಟ್ಟಿಗೆ ಕರಕೊಂಡು ಹೋಗಿ ತನ್ನ ಬೆರಳುಗಳನ್ನು ಆತನ ಕಿವಿಗಳಲ್ಲಿ ಇಟ್ಟು ಉಗುಳಿ[31] ಅವನ ನಾಲಿಗೆಯನ್ನು ಮುಟ್ಟಿ ಆಕಾಶದ ಕಡೆಗೆ ನೋಡಿ ನಿಟ್ಟುಸುರುಬಿಟ್ಟು ಅವನಿಗೆ ಎಪ್ಫಥಾ[32] ಎಂದು ಹೇಳಿದನು. ಆ ಶಬ್ದಕ್ಕೆ ತೆರೆಯಲಿ ಎಂದರ್ಥ (ಮಾರ್ಕ 7:33, 34).

ಯೇಸು ಆ ಮನುಷ್ಯನ ಕಿವಿಗಳಲ್ಲಿ ತನ್ನ ಬೆರಳುಗಳನ್ನು ಯಾಕೆ ಇಟ್ಟನು? ಆತನು ಯಾಕೆ ಉಗುಳಿದನು? ಇದು ನಮಗೆ ಹೇಳಲ್ಪಟ್ಟಿಲ್ಲ. ಇಂತಹ ಇತರೆ ಸ್ವಸ್ಥವಾಗಿಸುವಿಕೆಯಲ್ಲಿ ಈ ಕಾರ್ಯಗಳು ಇಲ್ಲದ್ದರಿಂದ ಅವುಗಳು ಸಾಂಧರ್ಭಿಕವಾಗಿ ಆತನು ಮಾಡಿದವುಗಳು ಆಗಿವೆ. ಇನ್ನೊಂದೆಡೆಯಲ್ಲಿ, "ನಿಟ್ಟುಸುರು" ಬಿಟ್ಟು ಆಕಾಶದ ಕಡೆಗೆ ನೋಡಿದ್ದು ಮಹತ್ವದ್ದಾಗಿದೆ: ಯಾವುದೂ ಅರಿವಾಗದಂತೆ ಕರ್ತನು ಯಾಂತ್ರಿಕವಾಗಿ ವಾಸಿಮಾಡಲಿಲ್ಲ ಎಂದು ನಾವು ತಿಳಿಯಬೇಕಾಗಿದೆ;[33] ದೈಹಿಕ ಮತ್ತು ಆತ್ಮೀಕ ಸಮಸ್ಯೆಯೊಂದಿಗೆ ಹೋರಾ ಡುವ ಪ್ರತಿಯೊಬ್ಬರ ಬಗ್ಗೆಯೂ ಆತನ ಹೃದಯವು ಕಲಕಿಹೋಗುತ್ತಿತ್ತು. "ಜಗತ್ತಿನಲ್ಲಿರುವ ಮಿಲಿಯನ್‌ಗಟ್ಟಲೆ ಜನರು ಕಿವುಡರೂ ಮೂಖರೂ ಆಗಿದ್ದು ಎಂದಿಗೂ ಕೇಳಲಾರರು ಮತ್ತು ಮಾತನಾಡಲಾರದವರೂ ಆಗಿದ್ದಾರೆಂದು" ಆತನು ಯೋಚಿಸಿದ್ದರಿಂದಲೇ ಕ್ರಿಸ್ತನು ನಿಟ್ಟುಸಿರು ಇಟ್ಟಿರಬಹುದು ಎಂದು ಒಬ್ಬ ಲೇಖಕರು ಬರೆಯುತ್ತಾರೆ.[34]

ನಂತರ ಯೇಸು "ತೆರೆಯಲಿ ಎಂದು ಹೇಳಿದ ನಂತರ ಆ ಮನುಷ್ಯನ ಕಿವಿಗಳು ತೆರೆದವು ಆತನ ನಾಲಿಗೆಯ ಕಟ್ಟು ಬಿಚ್ಚಿಹೋಯಿತು, ಆತನು ನೆಟ್ಟಗೆ ಮಾತನಾಡಿದನು"

(ಮಾರ್ಕ 7:35). ಜನರು "ಅತ್ಯಂತಾಶ್ಚರ್ಯಪಟ್ಟು, ಎಲ್ಲಾ ಚೆನ್ನಾಗಿ ಮಾಡಿದ್ದಾನೆ" ಎಂದು ಮಾತನಾಡಿದರು (ಮಾರ್ಕ 7:37).

ಕೊನೆಗೆ ಯೇಸು ಆ ಪ್ರದೇಶವನ್ನು ಬಿಟ್ಟಾಗ, ಸುವಾರ್ತೆಯನ್ನು ಸ್ವೀಕರಿಸಲು ಸಿದ್ಧವಿರುವ ಜನರ ಹೃದಯಗಳನ್ನು ಬಿಟ್ಟನು.[35] ನಾನು ಮತ್ತು ನೀನು ಅಡ್ಡಿಪಡಿಸುವಿಕೆಗೆ ಸರಿಯಾದ ರೀತಿಯಲ್ಲಿ ಪ್ರತಿಕ್ರಿಯಿಸಿದ್ದಾದರೆ, ನಾವು ಕರ್ತನ ಆತ್ಮವನ್ನು ತೋರಿಸುವವರಾಗಿದ್ದೇವೆ ಮತ್ತು ಇದು ನಮ್ಮನ್ನು ಅಡ್ಡಿಪಡಿಸುವವರಿಗೆ ಸುವಾರ್ತೆಯನ್ನು ಬೋಧಿಸಲು ಬಾಗಿಲನ್ನು ತೆರೆಯ ಬಹುದಾಗಿದೆ. ಇದರ ಬಗೆಗೆ ಯೋಚಿಸಿರಿ.

## ಬಿಕ್ಕಟ್ಟಿನಿಂದ ಅಡ್ಡಿಪಡಸುವಿಕೆ
## (ಮತ್ತಾಯ 15:32-38; ಮಾರ್ಕ 7:36; 8:1-9)

ಹಿಂದೆ ಯೇಸು ಸ್ವಸ್ಥನಾದ ಒಬ್ಬ ಮನುಷ್ಯನಿಗೆ ತನಗೆ ಸಂಭವಿಸಿದ್ದನ್ನು ಪ್ರತಿಯೊಬ್ಬರಿಗೂ ಹೇಳಲು ಸೂಚಿಸಿದ್ದನು (ಮಾರ್ಕ 5:19). ಈ ಸಾರಿ, ಆತನು ತನ್ನ ಕೇಳುಗರಿಗೆ, "ಯಾರಿಗೂ ತಿಳಿಸ*ಬಾರದು*" ಎಂಬ ಆಜ್ಞೆಯನ್ನು ಕೊಡುತ್ತಾನೆ (ಮಾರ್ಕ 7:36; ಒತ್ತಿ ಹೇಳಿದ್ದು ನನ್ನದು). ಯಾಕೆಂದರೆ ಆತನ ಉದ್ದೇಶವು ಬದಲಾಗಿತ್ತು. ತನ್ನ ಶಿಷ್ಯರೊಂದಿಗೆ ಏಕಾಂತವಾಗಿರುವ ಸಮಯದ ಅವಶ್ಯಕತೆಯು ಆತನಿಗಿತ್ತು.

ಯಥಾಪ್ರಕಾರ, ಆತನ ವಿನಂತಿಯು ಪಾಲಿಸಲ್ಪಡಲಿಲ್ಲ, ಮತ್ತು ಆತನ ಜನಪ್ರೀಯತೆಯು ಆ ಪ್ರದೇಶದುದ್ದಕ್ಕೂ ಹರಡಿತು (ನೋಡಿರಿ ಮಾರ್ಕ 7:36). ಸಂಖ್ಯೆಯು ಬೆಳೆದು ಅಲ್ಲೊಂದು "ಗುಂಪು ಕೂಡಿಬಂದಿತು" (ಮಾರ್ಕ 8:1); ಸುಮಾರು "ಹೆಂಗಸರು ಮಕ್ಕಳು ಅಲ್ಲದೆ, ಗಂಡಸರೇ ನಾಲ್ಕು ಸಾವಿರ ಮಂದಿ" ಅಲ್ಲಿ ನೆರದಿದ್ದರು (ಮತ್ತಾಯ 15:38). ಬಹುಶಃ ಎಂಟರಿಂದ ಹನ್ನೆರಡು ಸಾವಿರ ಜನರು ಅಲ್ಲಿ ಉಪಸ್ಥಿತವಿದ್ದಿರಬಹುದು. "ಕೆಲವರು ಬಲು ದೂರದಿಂದ ಬಂದವರಿದ್ದರು" (ಮಾರ್ಕ 8:3).

### ಕ್ಲೇಶಪಡಿಸುವ ಅಡ್ಡಿಪಡಿಸುವಿಕೆ

ತಿರುಗೊಂದಾವರ್ತಿ, ಯೇಸು ಅಡ್ಡಿಪಡಿಸುವಿಕೆಗೆ ಒಳಗಾದಾಗ ಆ ಅಡ್ಡಿಪಡಿಸುವಿಕೆಯು ಮೂರು ದಿನಗಳವರೆಗೆ ಮುಂದುವರೆದಾಗಲೂ ಕೂಡಾ ಆತನು ಶಾಂತನಾಗಿದ್ದನು (ಮತ್ತಾಯ 15:32; ಮಾರ್ಕ 8:2). ಆ ಮೂರು ದಿನಗಳಿಗೆ ಸಂಬಂಧಿಸಿದಕ್ಕೆ ಯಾವ ವಿವರಗಳನ್ನು ನಾವು ಕೊಡಲಾರೆವು, ಆದರೆ ಆತನು ಬೋಧಿಸುವುದನ್ನು ಮತ್ತು ಸ್ವಸ್ಥಮಾಡುವುದನ್ನು ಮುಂದುವರೆಸಿದ್ದಲ್ಲಿ ಯಾವ ಸಂಶಯವೂ ಇಲ್ಲ.[36]

ಈ ಹಿಂದೆ ಕಪೆರ್ನೌಮಿನಿಂದ ಆತನನ್ನು ಹಿಂಬಾಲಿಸಿದವರಂತೆ ಇವರಿರಲಿಲ್ಲ,[37] ಈ ಗುಂಪಿನಲ್ಲಿರುವವರು ತಮ್ಮೊಡನೆ ತಮಗೆ ಬೇಕಾದದ್ದನ್ನು ಸಿದ್ಧಮಾಡಿಕೊಂಡು ಬಂದಿದ್ದರು - ಆದರೆ ಮೂರು ದಿನಗಳ ನಂತರ ಸರಬರಾಜಿಗಾಗಿ ಅವರು ಓಡಾಡಿದರು. ಆಗ, ಅಡ್ಡಿಪಡಿಸುವಿಕೆಯ ಸ್ವಭಾವವು ಬದಲಾಯಿತು: ಅವರು ಆಹಾರದ ಅವಶ್ಯಕತೆಗಾಗಿ ಹಾತೊರೆಯುವವರಾದರು!

### ಪ್ರಯೋಜನಕಾರಿಯಾದ ವಿರಾಮ

ತನ್ನ ಸ್ವಭಾವದೊಡನೆ ಇರಿಸಿಕೊಳ್ಳುತ್ತಾ, ಕರ್ತನು ತೂರಿಗಿ ಕ್ಲೇಶಪಡಿಸುವ ಅಡ್ಡಿಪಡಿಸುವಿಕೆಯನ್ನು ಪ್ರಯೋಜನಕಾರಿಯಾದ ವಿರಾಮವಾಗಿ ತಿರುಗಿಸಿದನು. ಹಿಂದಿನ ಪಾಠವನ್ನು ಪುನಸ್ಥಾಪಿಸುತ್ತಾ, ಆತನು ಆ ಸಮಸ್ಯೆಯನ್ನು ತನ್ನ ಶಿಷ್ಯರಿಗೆ ವಹಿಸಿಕೊಟ್ಟನು (ಮತ್ತಾಯ 15:32; ಮಾರ್ಕ 8:1-3). ಅದಕ್ಕೆ ಅವರು "ಈ ಸಮಸ್ಯೆಯನ್ನು ಹೇಗೆ ನಿಭಾಯಿಸಬೇಕೆಂದು ನಾವು ತಿಳಿಯೆವು ಎಂದು ಹೇಳಿದರು" (ಮತ್ತಾಯ 15:33; ಮಾರ್ಕ 8:4)!

ಈ ಅಪೊಸ್ತಲರು ಐದು ಸಾವಿರ ಜನರಿಗೆ ಉಣಿಸುವುದು ಮತ್ತು ನಾಲ್ಕು ಸಾವಿರ ಜನರಿಗೆ ಉಣಿಸುವುದು ಇವುಗಳ ಭಿನ್ನತೆಯು ಒಂದೇ ಘಟನೆಯದ್ದಾಗಿದೆ ಎಂದು ಅವರು ಪರಿಗಣಿಸುವವರಾಗಿದ್ದಾರೆ. ಇಂಥ ಪರಿಗಣಿಸುವಿಕೆಗೆ ಯಾವ ನ್ಯಾಯಬದ್ಧತೆಯು ಇರುವುದಿಲ್ಲ:

ಮೊದಲು, ಮತ್ತಾಯ ಮತ್ತು ಮಾರ್ಕರು *ಎರಡೂ* ಘಟನೆಗಳನ್ನು ದಾಖಲಿಸಿದ್ದಾರೆ - ಮತ್ತು ಅವರು ದಶಕಗಳ ಹಿಂದೆ ನಡೆದು ಹೋದ ಕಥೆಗಳನ್ನು ಬರೆಯುತ್ತಿಲ್ಲ. ಮತ್ತಾಯನು ಒಬ್ಬ ಅಪೊಸ್ತಲನಾಗಿದದ್ದರಿಂದ ಪ್ರತ್ಯಕ್ಷಸಾಕ್ಷಿಯ ರೂಪದಲ್ಲಿ ಬರೆಯುತ್ತಿದ್ದಾನೆ. ಮಾರ್ಕನ ವಿವರಣೆಯು ಪ್ರತ್ಯಕ್ಷ ಸಾಕ್ಷಿಗಳ ಸಾಕ್ಷಿಯ ಆಧಾರಿತವಾದದ್ದಾಗಿದೆ (ಅದು ಅಪೊಸ್ತಲರಲ್ಲಿ ಒಬ್ಬನಾದಂಥ ಪೇತ್ರನು[38]).

ಎರಡನೆಯದು, ನಂತರದಲ್ಲಿ ಯೇಸು ತನ್ನ ಶಿಷ್ಯರಿಗೆ ಎಚ್ಚರಿಸುವುದಕ್ಕಾಗಿ *ಎರಡೂ* ಘಟನೆಗಳನ್ನು ಸೂಚಿಸಿದನು (ಮತ್ತಾಯ 16:9, 10; ಮಾರ್ಕ 8:19, 20).

ಮೂರನೆಯದು, ಎರಡೂ ಘಟನೆಗಳ ಮಧ್ಯೆ ಸಾಮ್ಯತೆಯು ಇದ್ದಾಗಲೂ, ಅಲ್ಲಿ ಭಿನ್ನತೆಗಳೂ ಸಹ ಇವೆ:

(1) ಸ್ಥಳವು ಭಿನ್ನವಾಗಿತ್ತು. ಮೊದಲನೆಯ ಊಟಮಾಡಿಸುವಿಕೆಯ ಅದ್ಭುತ ಕಾರ್ಯದ ಸ್ಥಳವು ಗಲಿಲಾಯ ಸಮುದ್ರದ ಉತ್ತರದ ಕೊನೆಯಲ್ಲಿ ಇತ್ತು; ಎರಡನೆಯದು ದಕ್ಷಿಣದ ಕೊನೆಯಲ್ಲಿ ಇತ್ತು.

(2) ಜನರ ಗುಂಪು ಬೇರೆಯಾಗಿತ್ತು. ಮೊದಲನೆಯದರಲ್ಲಿ ಹೆಚ್ಚಾಗಿ ಯೆಹೂದ್ಯರಿದ್ದರು: ಎರಡನೆಯದಲ್ಲಿ ಹೆಚ್ಚಾಗಿ ಅನ್ಯಜನರಿದ್ದರು.

(3) ಜನರ ಗುಂಪಿನ ಅಳತೆಯೂ ಭಿನ್ನವಾಗಿತ್ತು - ಐದು ಸಾವಿರ ಗಂಡಸರು - ನಾಲ್ಕು ಸಾವಿರ ಜನರು.

(4) ಅಲ್ಲಿ ಒಳಗೊಂಡ ಸಮಯವೂ ಭಿನ್ನವಾಗಿತ್ತು. ಮೊದಲನೆಯ ಗುಂಪು ಒಂದು ದಿನ ಮಾತ್ರ ಅಲ್ಲಿತ್ತು; ಎರಡನೆಯದು ಮೂರು ದಿನಗಳಿಂದ ಅಲ್ಲಿತ್ತು.

(5) ಆಹಾರದ ಅವಶ್ಯಕತೆಯ ಕಾರಣವೂ ಭಿನ್ನವಾಗಿತ್ತು. ಮೊದಲನೆಯ ಗುಂಪು ಆಹಾರವನ್ನು ತಂದಿರಲಿಲ್ಲ; ಎರಡನೆಯವರು ಆಹಾರಕ್ಕಾಗಿ ಓಡಾಡಿದರು.

(6) ಅಲ್ಲಿ ಲಭ್ಯವಿದ್ದ ಸಂಪನ್ಮೂಲಗಳೂ ಭಿನ್ನವಾಗಿದ್ದವು. ಐದು ರೊಟ್ಟಿ ಎರಡು ಮೀನುಗಳು ಮೊದಲ ಸಾರಿ ಲಭ್ಯವಿದ್ದವು; ಏಳು ರೊಟ್ಟಿ ಎರಡು ಮೀನುಗಳು ಎರಡನೆಯದಲ್ಲಿ ಒಳಗೊಂಡಿದ್ದವು.

(7) ಉಪಯೋಗಿಸಿದ ಸಾಧನಗಳು ಭಿನ್ನವಾಗಿದ್ದವು. ಮೊದಲ ಘಟನೆಯಲ್ಲಿ ಹನ್ನೆರಡು ಚಿಕ್ಕ ಬುಟ್ಟಿಗಳು ಬಳಸಲ್ಪಟ್ಟವು; ಏಳು ದೊಡ್ಡ ಬುಟ್ಟಿಗಳು[39] ಎರಡನೆಯ ಸಾರಿ ಬಳಕೆಯಾದವು.

ಇತರ ಭಿನ್ನತೆಗಳೂ ಸಹ ಗಮನಿಸಲ್ಪಟ್ಟಿವೆ: ಮೊದಲನೆಯ ಗುಂಪು ಹುಲ್ಲಿನ ಮೇಲೆ ಕುಳಿತರೆ (ಮತ್ತಾಯ 14:19; ಮಾರ್ಕ 6:39) ಎರಡೆಯ ಗುಂಪು ನೆಲದ ಮೇಲೆ ಕುಳಿತಿತ್ತು (ಮತ್ತಾಯ 15:35; ಮಾರ್ಕ 8:6). ಮೊದಲ ಗುಂಪು ಯೇಸುವನ್ನು ಅರಸನನ್ನಾಗಿ ಮಾಡಲು ಪ್ರಯತ್ನಿಸಿದವರು; ಅದಕ್ಕೆ ಸಮಾನವಾದ ಪ್ರತಿಕ್ರಿಯೆಯು ಎರಡನೆಯ ಗುಂಪಿನಲ್ಲಿರಲಿಲ್ಲ. ಸತ್ಯವೇದವು ದೈವಜ್ಞಾನದಿಂದ ಪ್ರೇರೇಪಿತವಾದದ್ದೆಂದು ನಂಬುವ ಪ್ರತಿಯೊಬ್ಬರೂ ಇವೆರಡೂ ಬೇರೆ ಬೇರೆ ಘಟನೆಗಳೆಂದು ಪರಿಗಣಿಸುವವರಾಗಿದ್ದಾರೆ. ಇದು ಈ ರೀತಿಯಲ್ಲಿ ಇರುವುದಾದರೆ, ಅಪೊಸ್ತಲರ ಪ್ರತಿಕ್ರಿಯೆಯನ್ನು ನಾವು ಹೇಗೆ ವಿವರಿಸಬಹುದು?

ಸತ್ಯಾಂಶವೆಂದರೆ, ಸಾಮಾನ್ಯವಾಗಿ ಹೊಸದಾದ ಸತ್ಯವನ್ನು ಅರಿತುಕೊಳ್ಳಲು ಒಂದು ಸಲಕ್ಕಿಂತ ಹೆಚ್ಚಿನ ಸಮಯವು ಬೇಕಾಗುತ್ತಿತ್ತು.[40] ಹೊಸದೇನನ್ನಾದರೂ ನಾನು ಕಲಿಯುವ ಮುಂಚೆ ಇದು ಗಣನೀಯವಾದ ಪುನರಾವರ್ತನೆಯನ್ನು ತೆಗೆದುಕೊಳ್ಳುವುದಾಗಿದೆ ಎಂಬುದನ್ನು

ನಾನು ಒಪ್ಪಿಕೊಳ್ಳಲೇಬೇಕು. ಇದನ್ನು ನೀವು ಒಪ್ಪಲಿ ಬಿಡಲಿ, ಇದು ಸಹ ನಿಮಗೋಸ್ಕರ ನಿಜವಾಗಿದೆ. ತಿರುಗಿ ತಿರುಗಿ ತನ್ನ ವಿದ್ಯಾರ್ಥಿಗಳೊಡನೆ ಅದೇ ಸತ್ಯದೊಡನೆ ಹೋಗಬೇಕಾದ್ದಾದರೆ ಯೇಸುವಿಗೆ ಎಷ್ಟು ಶಾಂತತೆ ಇರಬಹುದು! ಹಸಿದವರು ಕ್ರಿಸ್ತನಿಗೂ ಮತ್ತು ಆತನ ಅಪೊಸ್ತಲರಿಗೂ ಅಪರಿಚಿತವಾಗಿರಲಿಲ್ಲ; ನಿಯಮದಂತೆ, ಯೇಸು ಅದ್ಭುತಕಾರ್ಯಗಳ ಮೂಲಕ ಹಸಿವೆಯನ್ನು ಶಮನಗೊಳಿಸುವವನಾಗಿರಲಿಲ್ಲ (ನೋಡಿರಿ ಯೋಹಾನ 4:6, 8, 31). ಒಂದು ಸೂಚನೆಯಂತೆ ಅಂತಹ ಅದ್ಭುತಕಾರ್ಯಗಳನ್ನು ಆತನೆಂದಿಗೂ ಮಾಡಲಿಲ್ಲ. ಈ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳುವುದರ ಮೂಲಕ (ಯೋಹಾನ 6:26, 27), ಮೊದಲು ನಮಗೆ ಕಾಣಿಸಿಕೊಂಡಂತೆ ಅವರ ಪ್ರತಿಕ್ರಿಯೆಯು ವಿಚಿತ್ರವಾಗಿರಲಿಲ್ಲ.

ಉಳಿದ ಕಥೆಯನ್ನು ನೀವು ಬಲ್ಲವರಾಗಿದ್ದೀರಿ: ತಿರುಗಿ, ಯೇಸು ಅದ್ಭುತೀಯವಾಗಿ ಜನರ ಗುಂಪಿಗೆ ಊಟಮಾಡಿಸಿದನು (ಮತ್ತಾಯ 15:34-38; ಮಾರ್ಕ 8:5-9). ಅದನ್ನು ಮನದಲ್ಲಿ ಇರಿಸಿಕೊಂಡು ಆತನು ಕೇವಲ ಹಸಿವೆಯನ್ನು ಶಮನ ಮಾಡುವುದಕ್ಕಾಗಿ ಇದನ್ನು ಮಾಡಲಿಲ್ಲ, ಆದರೆ ಹನ್ನೆರಡೂ ಜನರಿಗೆ ಅವಶ್ಯವಿದ್ದ ಪಾಠವನ್ನು ಕಲಿಸಲು ಸಹ ಮಾಡಿದನು. (ನಮ್ಮ ಮುಂದಿನ ಪಾಠದಲ್ಲಿ ಇದರ ಬಗೆಗೆ ಹೆಚ್ಚಿನದನ್ನು ಹೇಳಲಿದ್ದೇವೆ.)

ಈ ಕ್ಷಣಕ್ಕೋಸ್ಕರ ಈ ಪಾಠವನ್ನು ಕಲಿತುಕೊಳ್ಳಿರಿ: ಆಗಾಗ ಅಡ್ಡಿಪಡಿಸುವಿಕೆಗಳು ಬಂದಾಗ ಅವು ಸಮಗ್ರವಾದ ಯೋಜನೆಗೆ ಒಂದು ಕೊಡುಗೆಯನ್ನು ಕೊಡುತ್ತವೆಯೇ ಹೊರತು ಆದರಿಂದ ದೂರ ಹೋಗುವುದಿಲ್ಲ. ಹೀಗೆ, ಅಡ್ಡಿಪಡಿಸುವಿಕೆಗಳು ಬಂದಾಗ, ನೀವು ಈಗಾಗಲೇ ಯೋಜಿಸಿದ್ದವುಗಳಲ್ಲಿ ಅವು ಹೇಗೆ ಹೊಂದಿಕೊಳ್ಳಬಹುದೆಂದು ಪರಿಗಣಿಸಿರಿ. ಆಗ ನೀವು ಮಾಡಿದ್ದಕಿಂತಲೂ ಉತ್ತಮವಾಗಿ ಕರ್ತನು ಯೋಜಿಸುತ್ತಾನೆ ಎಂದು ನೀವು ಕಂಡುಕೊಳ್ಳುವಿರಿ!

## ಮುಕ್ತಾಯ

ಯೇಸು ತನ್ನ ಇಚ್ಛೆಗಳನ್ನು ತನ್ನ ಶಿಷ್ಯರ ಮೇಲೆ ಮಾತ್ರ ಬಿಟ್ಟುಕೊಡಲಿಲ್ಲ. ಜನರಿಗೆ ಊಟಮಾಡಿಸಿ, ಆತನು ಗುಂಪನ್ನು ಕಳುಹಿಸಿಬಿಟ್ಟನು ಮತ್ತು ದೋಣಿ ಹತ್ತಿ ಸಮುದ್ರದ ಪಶ್ಚಿಮದೆಡೆಗೆ ಬಂದನು (ಮತ್ತಾಯ 15:39; ಮಾರ್ಕ 8:9, 10). ನೀವು ಎರಡು ಅಂಶಗಳಿಂದ ಖಚಿತರಾಗಿರಬಹುದು; ಹೇಗೋ ಅನೇಕ ಅಡ್ಡಿಪಡಿಸುವಿಕೆಗಳು ಬರಬಹುದು (ಮತ್ತಾಯ 15:39; 16:1; ಮಾರ್ಕ 8:10, 11), ಮತ್ತು ಕ್ರಿಸ್ತನು ಯಾವಾಗಲೂ ಕ್ಲೇಶಪಡಿಸುವ ಅಡ್ಡಿಪಡಿಸುವಿಕೆಯನ್ನು ಪ್ರಯೋಜನಕಾರಿಯಾದ ವಿರಾಮವಾಗಿ ತಿರುಗಿಸುವವನಾಗಿದ್ದಾನೆ.

ಜೀವನವು ಏನೆಂದರೆ "ನಾವು ಇತರೆ ಯೋಜನೆಗಳನ್ನು ಮಾಡುವಾಗ ಅದು ನಮಗೆ ನಿಜವಾಗಿಯೂ ಸಂಭವಿಸುವುದಾಗಿದೆ" ಎಂದು ಕೆಲವರು ಬರೆಯುವವರಾಗಿದ್ದಾರೆ.[41] ಅದನ್ನು ನಾವು ತೆಗೆದುಕೊಂಡು, "ಜೀವಿತವು ನಾವು ಕಾಳಜಿಪೂರ್ವಕವಾಗಿ ಮಾಡಿದ ಯೋಜನೆಗಳು ಅಡ್ಡಿಪಡಿಸಲ್ಪಟ್ಟಾಗ ಆಗುವುದೇ ಜೀವಿತ" ಎಂದು ಹೇಳಬಹುದು. ಅಡ್ಡಿಪಡಿಸುವಿಕೆಗಳು ಬಂದಾಗ ಅವುಗಳು ಬರುವವು ಆಗಿವೆ ಮತ್ತು ಕಿರಿಕಿರಿಯಾದ ಅಡ್ಡಿಪಡಿಸುವಿಕೆಗಳನ್ನು ನಮ್ಮ ಜೀವಿತದ ಶಕ್ತಿಯುತವಾದ ವಿರಾಮವನ್ನಾಗಿ ಹೇಗೆ ತಿರುಗಿಸಬೇಕು ಎಂಬುದನ್ನು ಯೇಸುವಿನಿಂದ ಕಲಿಯಲು ಸಹ ಆತನು ನಮಗೆ ಸಹಾಯ ಮಾಡಲಿ!

---

## ಮಾಹಿತಿ

ಇದಕ್ಕೆ ಉದ್ದನೆಯ ಶೀರ್ಷಿಕೆಯನ್ನು ನೀನು ಬಯಸಿದ್ದಾದರೆ, ಈ ಪಾಠವನ್ನು ನೀನು "ಕ್ಲೇಶಪಡಿಸುವ ಅಡ್ಡಿಪಡಿಸುವಿಕೆಯಿಂದ ಪ್ರಯೋಜನಕಾರಿಯಾದ ವಿರಾಮ" ಎಂದೂ ಕರೆಯಬಹುದು. ಇದಕ್ಕೆ ಚಿಕ್ಕದಾದ ಶೀರ್ಷಿಕೆಯನ್ನು ನೀನು ಬಯಸಿದ್ದಾದರೆ "ಅಡ್ಡಿಪಡಿಸುವಿಕೆಯೊಂದಿಗೆ ಹೊಂದಿಕೊಳ್ಳುವದು" ಎಂದು ಪ್ರಯತ್ನಿಸಬಹುದು.

ಈ ಪಾಠದಲ್ಲಿ ಮೂರು ಕಥೆಗಳು ಪ್ರತಿಯೊಂದು ಪ್ರಸಂಗದ ಮೂಲವಾಗಿ ಕಾರ್ಯಮಾಡುವವುಗಳಾಗಿವೆ.

**ಕಥೆ 1**

ಈ ಕಥೆಯನ್ನು ಅನುಸರಿಸಿ, ನಾನು ಶಿಷ್ಯರು ಸಂಪ್ರದಾಯವನ್ನು ಮುರಿದರೆಂದು ಆರೋಪಿಸಿದ ಫರಿಸಾಯರ ಮೇಲೆ ಪ್ರಸಂಗವನ್ನು ಹೊಂದಿದ್ದೇನೆ. ಆ ಕಥೆಯು ವಿವಿಧ ಮಾರ್ಗಗಳಿಂದ ತಲುಪಬಹುದಾಗಿದೆ. ಇತರ ಬಾಹ್ಯರೇಖೆಗಳು ಇಲ್ಲಿವೆ:

I. ಆರೋಪಿಸುವಿಕೆ (ಮತ್ತಾಯ 15:1, 2; ಮಾರ್ಕ 7:1-5).
II. ಉತ್ತರ (ಮತ್ತಾಯ 15:3-9; ಮಾರ್ಕ 7:6-13).
III. ಅನ್ವಯ (ಮತ್ತಾಯ 15:10-20; ಮಾರ್ಕ 7:14-23).

"ಫರಿಸಾಯರನ್ನು ಯೇಸು ಅಚ್ಚರಿಗೊಳಿಸಿದ ದಿನ,"[42] ಎಂಬುದಕ್ಕೆ ಸಮಾನ ವಿಷಯಗಳ ಮೇಲೆ ನೀನು ಬೋಧಿಸಬಹುದು:

I. ಯೇಸು ಹಲವು ಬಾರಿ ಮಾನವ ಸಂಪ್ರದಾಯಗಳನ್ನು ಸ್ಥಾನಪಲ್ಲಟ ಮಾಡಿ ದೇವರ ವಾಕ್ಯವನ್ನು ಬೋಧಿಸುತ್ತಿದ್ದುದನ್ನು ಕಂಡು ಫರಿಸಾಯರು ಚಕಿತರಾದರು (ಮತ್ತಾಯ 15:3-6).
II. ಆತನ ಬೋಧನೆಗಳು ಅದರ ಹೊರಗಿನ ತೋರುವಿಕೆ ಪ್ರಮುಖವಲ್ಲದ್ದರಿಂದ ಅವರು ಚಕಿತರಾರು (ವಚನಗಳು 7, 8).
III. ಆತನ ಬೋಧನೆಗಳು ಮನುಷ್ಯನು ಮತ್ತು ಆತನು ನಿಯೋಜಿಸಿದ ಕಟ್ಟಳೆಗಳು ನಿಶ್ಪ್ರಯೋಜಕವಾದವುಗಳು ಎಂದು ಹೇಳುವುದಕ್ಕೆ ಅವರು ಚಕಿತರಾದರು (ವಚನ 9).
IV. ಆತನ ಬೋಧನೆಗಳು ಕೈಗಳ ಶುದ್ಧತೆಗಿಂತ ಹೃದಯದ ಶುದ್ಧತೆಯು ಪ್ರಮುಖವಾದದ್ದು ಎಂದಾಗ ಅವರು ಚಕಿತರಾದರು (ವಚನಗಳು 10, 11, 15-20).
V. ಆತನ ಬೋಧನೆಗಳು ಮಾನವ ನಿರ್ಮಿತ ಸಂಗತಿಗಳು ಕಿತ್ತುಹಾಕಲ್ಪಡುವವು ಎಂದಾಗ ಅವರು ಚಕಿತರಾದರು (ವಚನ 13).
VI. ಆತನ ಬೋಧನೆಗಳು ಪ್ರಾಮಾಣಿಕತೆಯಿದ್ದರೆ ಮಾತ್ರ ಸಾಲದು ಎಂದಾಗ ಅವರು ಚಕಿತರಾದರು (ವಚನ 14).[43]

ರಿಚರ್ಡ್ ರೋಗರ್ ಈ ಕಥೆಯ ಮೇಲೆ ಬೋಧಿಸುವಾಗ, ಕೊನೆಯಲ್ಲಿ, ಈ ಆತ್ಮೀಕ ಪಾಠಗಳನ್ನು ಅವರು ಸೂಚಿಸಿದರು:

- ಸತ್ಯದ ವೈರಿಗಳು ಯಾವಾಗಲೂ ಧಾರ್ಮಿಕ ವ್ಯಕ್ತಿಗಳು ಆಗಿದ್ದು ಮಾನವನ ಸಂಪ್ರದಾಯದ ಪ್ರಕಾರ ಜೀವಿಸುವವರಾಗಿರುತ್ತಾರೆ.
- ಪಾಪದ ಬಗ್ಗೆ ಮತ್ತು ದೇವರಿಗೆ ಅವಿದೇಯರಾಗಿದ್ದಕ್ಕಾಗಿ ನೆವವನ್ನು ಕೊಡುವ ಯಾವುದೇ ಧಾರ್ಮಿಕ ಪದ್ಧತಿಯಿಂದ ನಾವು ಎಚ್ಚರದಿಂದಿರಬೇಕು.
- ನಮ್ಮ ತುಟಿಗಳಿಂದ ಮಾತ್ರ ಬರುವ ಆರಾಧನೆಗಳಿಂದ ಎಚ್ಚರದಿಂದಿರಬೇಕೇ ಹೊರತು ಹೃದಯದಿಂದ ಬಂದದ್ದಕ್ಕಲ್ಲ.
- ಆಂತರ್ಯದ ಮಾನವನನ್ನು ನಾವು ಪ್ರಧಾನವಾಗಿಸಿದ್ದೇ ಆದರೆ, ಬಾಹ್ಯ ಮನುಷ್ಯನು ದೇವರು ಏನನ್ನು ಬಯಸುತ್ತಾನೋ ಆದಾಗಿರುತ್ತಾನೆ. ನಿಜವಾದ ಪವಿತ್ರತೆಯು ಒಳಗಿನಿಂದ ಬರುವುದಾಗಿದೆ.

- ಸಂಪ್ರದಾಯಗಳನ್ನು ಮುರಿದು ಹಾಕುವದು ಕಷ್ಟಸಾಧ್ಯವಾದದ್ದು. ಹಿಂದಿನದನ್ನು ಹಿಡಿದುಕೊಳ್ಳಲು ಮತ್ತು ಯಾವುದೇ ಬದಲಾವಣೆಯನ್ನು ಬಯಸದ ನಮ್ಮೊಳಗಿನದು ಒಂದು ಅದನ್ನು ಹಿಡಿದುಕೊಂಡಿರುವುದಾಗಿರುತ್ತದೆ. ಪೇತ್ರನೂ ಸಹಿತ ಈ ಪಾಠವನ್ನು ಎರಡು ಸಾರಿ ಕಲಿತನು![44]

ಫರಿಸಾಯರ ಆರೋಪಿಸುವಿಕೆಯ ಕಥೆಯ ಚಿಕ್ಕ ಅಂಶವು ಪ್ರಸಂಗದ ಮೂಲದತ್ತ ನಡೆಸುವುದಾಗಿದೆ. (1) ಉದಾಹರಣೆಗೆ, ಯೇಸುವಿನ "ಕೊರ್ಬಾನ್" ಉದಾಹರಣೆಯು "ನಾವು ಮಾಡಿದ ಹಾಗೆ *ನಾವು* ಯಾಕೆ ನಮ್ಮ ತಂದೆತಾಯಿಗಳನ್ನು ನೋಡಿಕೊಳ್ಳಬೇಕು?" ಎಂಬುದನ್ನು ಮಂಡಿಸಲು ಪೀಠಿಕೆಯಾಗಿ ಬಳಸಬಹುದಾಗಿದೆ. ಬಹುಸಮಯದವರೆಗೆ ಈ ನೆವವನ್ನು ನಾವು ಹೊಂದಿರಲಾರೆವು, ಆದರೆ ಜನರು, "ಅವುಗಳು ಅದು ನಿಜವಾಗಿಯೂ ನನ್ನ ಜವಾಬ್ದಾರಿ ಅಲ್ಲ" ಎಂಬಂತೆ ಇನ್ನೂ ನೆವವನ್ನು ಹೊಂದಿರುತ್ತಾರೆ. (2) ಯೆಶಾಯದಲ್ಲಿರುವ ವ್ಯಾಖ್ಯೆಯು "ಖಾಲಿಯಾದ ಆರಾಧನೆ" ಎಂಬ ಪ್ರಸಂಗದ ಮೇಲೆ ಸಂಗತಿಗಳನ್ನು ಒದಗಿಸುವುದಾಗಿದೆ. ಯಾವುದೇ ಮತ್ತು ಎಲ್ಲ ಆರಾಧನೆಗಳು ದೇವರಿಗೆ ಮೆಚ್ಚಿಕೆಯಾದದ್ದು ಎಂದು ಕೆಲವರು ಯೋಚಿಸುವವರಾಗಿರುತ್ತಾರೆ, ಆದರೆ ದೇವರ ವಾಕ್ಯಗಳು ಎಲ್ಲಿ ಗೌರವಿಸಲ್ಪಡುವುದಿಲ್ಲವೋ ಅಥವಾ ಆರಾಧನೆಯ ಹೃದಯದಿಂದ ಬರುವುದಿಲ್ಲವೋ ಆ ಆರಾಧನೆಯು ನಿಷ್ಪ್ರಯೋಜಕವಾದದ್ದು ಅಥವಾ ಖಾಲಿಯದದ್ದು ಎಂದು ವೇದಭಾಗವು ಹೇಳು ವುದಾಗಿದೆ. ಮೊದಲ ಅಂಶವು ಹೊಸ ಒಡಂಬಡಿಕೆಯ ವಿವಿಧದ ಆರಾಧನೆಯಿಂದ ಮಾನವ ನಿರ್ಮಿತ ನಿರ್ಗಮನವನ್ನು ಬೋಧಿಸುವ ಅವಕಾಶವನ್ನು ಒದಗಿಸುವುದಾಗಿದೆ ಎರಡನೆಯ ಅಂಶವು ಈ ಪ್ರಸಂಗವನ್ನು ಸಭೆಗೆ ಅನ್ವಯಿಸುವುದಾಗಿದೆ. (3) ಅಂತಿಮವಾಗಿ, ಮತ್ತಾಯ 15:28-20 ಮತ್ತು ಮಾರ್ಕ 7:20-23ರಲ್ಲಿನ ಕ್ರಿಸ್ತನ ಮಾತುಗಳು "ಯಾವವು ಮಾನವನನ್ನು ಹೊಲೆಮಾಡುವವುಗಳು ಆಗಿವೆ" ಎಂಬುದನ್ನು ಬೋಧಿಲು ಬಳಸಬಹುದಾಗಿದೆ. ಅನೇಕ ವ್ಯಾಖ್ಯಾನಕಾರರು ಪ್ರತಿಯೊಂದು ಪಾಪಗಳ ಪಟ್ಟಿಯ ಮೇಲಿನ ಅಂಶಗಳನ್ನು ಹೊಂದಿದ್ದಾರೆ.

**ಕಥೆ 2**

ಸುರಫುಯನಿಕ ಸ್ತ್ರೀಯ ವಿವರಣೆಗಾಗಿ ದೊಡ್ಡ ಪ್ರಸಂಗವನ್ನು ಮಾಡಬಹುದು. ಈ ಪಾಠವನ್ನು ನಾನು ಸೂಚಿಸಿದಂತೆ, ಈ ಕಥೆಯನ್ನು ಪ್ರೀತಿಸುವವನಾಗಿದ್ದೇನೆ. ಈ ಸರಣಿಯ ಮುಂದಿನ ಪ್ರಸಂಗವು "ಸಂಪ್ರದಾಯಗಳ" ಮೇಲಿನ ಮಂಡನೆಗೋಸ್ಕರ ಅವಶ್ಯಕತೆಯನ್ನು ನಾನು ಗ್ರಹಿಸದೆ ಇದ್ದಂತ ಘಟನೆಯ ಮೇಲೆ ಕೇಂದ್ರಿಕರಿಸಬಹುದಾಗಿದೆ. ಆ ಘಟನೆಯ ಮೊದಲರ್ಧವು ಕಥೆಯ ಪುನಃ ಹೇಳುವಿಕೆಯ ನಾಟಕೀಯ ಚಿತ್ರಣವಾಗಿದೆ, ಎರಡನೆಯದು ಸ್ತ್ರೀಯು ಹೊಂದಿದ ಆ ತರಹದ ನಂಬಿಕೆಗೆ ಸಂಬಂಧಿಸಿದಂತೆ ಯೇಸು ಯಾಕೆ ಮಾತನಾಡಿದನು ಮತ್ತು ಅನ್ವಯವನ್ನು ಯಾಕೆ ಮಾಡಿದನು ಎಂಬುದನ್ನು ಹೊರಹಾಕುವುದಾಗಿದೆ.

**ಕಥೆ 3**

ನಾಲ್ಕು ಸಾವಿರ ಗಂಡಸರಿಗೆ ಊಟಮಾಡಿಸಿದ ಅದ್ಭುತಕಾರ್ಯದ ಐದು ಸಾವಿರ ಗಂಡಸರಿಗೆ ಊಟಮಾಡಿಸಿದ ಅದ್ಭುತಕಾರ್ಯದಲ್ಲಿ ಮಚ್ಚಿಹೋಗುವುದಾಗಿದೆ. ನಂತರದಲ್ಲಿ ಅಸಂಖ್ಯಾತ ಪ್ರಸಂಗಗಳು ಬೋಧಿಸಲ್ಪಟ್ಟವು, ಆದರೆ ಕೆಲವು ಹಿಂದೇ ಇದ್ದವು. ಹಿಂದೆ ನೀವು ಐದು ಸಾವಿರ ಗಂಡಸರಿಗೆ ಊಟಮಾಡಿಸಿದ ಅದ್ಭುತಕಾರ್ಯದ ಬಗ್ಗೆ ಬೋಧಿಸದಿದ್ದರೆ, ನೀನು "ಭಿನ್ನವಾಗಿ ಇರಲು" ಬಯಸಿದ್ದಾದರೆ, ನೀನು ನಾಲ್ಕು ಸಾವಿರ ಗಂಡಸರಿಗೆ ಊಟಮಾಡಿಸಿದ ಅದ್ಭುತಕಾರ್ಯವನ್ನು ಈ ಸಮಯದಲ್ಲಿ ಬೋಧಿಸಿರಿ. ಅದೇ ಪ್ರಮುಖ ಅಂಶಗಳು ಮತ್ತೊಂದು ಘಟನೆಯಲ್ಲಿ ಉಪಯೋಗಿಸಲ್ಪಡಬಹುದು.

**ಇನ್ನೊಂದು ಸಾಧ್ಯತೆ**

ಮಾರ್ಕ 7:37: "ಆತನು ಎಲ್ಲವನ್ನು ಚೆನ್ನಾಗಿ ಮಾಡುತ್ತಾನೆ" ಎಂಬ ವಾಕ್ಯದ ಮೇಲೆ ಪ್ರಸಂಗವು ಬೋಧಿಸಲ್ಪಟ್ಟಿದೆ. ಅಲ್ಲಿನ ಸಂಗತಿಗಳನ್ನು ನೋಡಿದಾಗ ಈ ಹೇಳಿಕೆಯ ಸಾಮಾನ್ಯ ಹೇಳಿಕೆಯು ಗಮನಿಸಲ್ಪಟ್ಟಿದೆ: "ಕರ್ತನು *ಯಾವಾಗಲೂ* ಚೆನ್ನಾಗಿ ಮಾಡುತ್ತಾನೆ." ನಂತರ ನೀನು ಒತ್ತಿ ಹೇಳಬೇಕೆಂದಿರುವ ವಿಶೇಷ ಸಂದರ್ಭಗಳನ್ನು ಎತ್ತಿಕೊಳ್ಳಬಹುದು: ಆತನು ಸೃಷ್ಟಿಯಲ್ಲಿ ಚೆನ್ನಾಗಿ ಮಾಡಿದ್ದಾನೆ; ಆತನ ಮದುವೆಗಳನ್ನು ಮತ್ತು ಮನೆಗಳನ್ನು ಸಂಸ್ಥಾಪಿಸುವುದನ್ನು ಚೆನ್ನಾಗಿ ಮಾಡಿದ್ದಾನೆ; ನಮಗೆ ಬೈಬಲ್‌ನ್ನು ಕೊಡುವುದರಲ್ಲಿ ಚೆನ್ನಾಗಿ ಮಾಡಿದ್ದಾನೆ; ಆತನು ಈ ಭೂಮಿಗೆ ಬರುವುದರ ಮೂಲಕ ಮತ್ತು ನಮಗೋಸ್ಕರ ಸಾಯುವುದರ ಮೂಲಕ ಚೆನ್ನಾಗಿ ಮಾಡಿದ್ದಾನೆ; ನಮಗಾಗಿ ರಕ್ಷಣೆಯ ಶರತ್ತನ್ನು ಕೊಡುವ ಮೂಲಕ ಚೆನ್ನಾಗಿ ಮಾಡಿದ್ದಾನೆ; ತನ್ನ ಸಭೆಯನ್ನು ಸ್ಥಾಪಿಸುವ ಮೂಲಕ ಮತ್ತು ಮುಂದಿನ ಎಲ್ಲವುಗಳನ್ನು ಮಾಡುವ ಮೂಲಕ ಚೆನ್ನಾಗಿ ಮಾಡಿದ್ದಾನೆ.

---

ಟಿಪ್ಪಣಿಗಳು

[1]ಈ ಅವಧಿಯಲ್ಲಿ ನಡೆದ ಘಟನೆಗಳನ್ನು ಕೇವಲ ಮತ್ತಾಯ ಮತ್ತು ಮಾರ್ಕರು ಮಾತ್ರ ಉಲ್ಲೇಖಿಸಿದ್ದಾರೆ. [2]ಯೋಹಾನ 7:1 ಯೋಹಾನ 6:4ರೊಡನೆ ಅಷ್ಟೊಂದು ನೇರವಾಗಿ ಕಟ್ಟಲ್ಪಟ್ಟಿಲ್ಲ ಎಂದು ಕಾಣುತ್ತದೆ. ವಚನಗಳು ಆ ಭಾಗವನ್ನು ಪರಿಚಯಿಸುವವುಗಳಾಗಿದ್ದು ಮತ್ತು ಯೇಸು ತಾನು ಗುಡಾರಗಳ ಹಬ್ಬಕ್ಕೆ ಯಾಕೆ ಹೋಗುವುದಿಲ್ಲವೆಂದು ತನ್ನ ಸಹೋದರರಿಗೆ ಯಾಕೆ ಹೇಳಿದನು ಎಂಬುದನ್ನು ವಿವರಿಸುವವು ಆಗಿವೆ. [3]ನನ್ನ ಭಾಗದಲ್ಲಿ, ನಾವು ಇದನ್ನು ಹಬ್ಬದ ಆರಂಭದಲ್ಲಿ "ಹೆಚ್ಚು ತೋರಿಸಿಕೊಳ್ಳದೆ ಇರುವದು" ಎಂದು ಹೇಳಬಹುದಾಗಿದೆ. [4]*ಕ್ರಿಸ್ತನ ಜೀವನ ಚರಿತ್ರೆ, 1ನೇ* ಪುಸ್ತಕದಲ್ಲಿ ಸಿಕ್ಕುವ ಮೂಲವಾದ ರೂಪರೇಶೆಯನ್ನು ನೀವು ಪುನರಾ ವರ್ತಿಸಬಹುದು. [5]ಈ ಘಟನೆಯ ಸಂಪೂರ್ಣ ಚರ್ಚೆಗಾಗಿ ಈ ಸಂಚಿಕೆಯಲ್ಲಿನ ಪ್ರಸಂಗಗಳನ್ನು ನೋಡಿರಿ. [6]ನಾವು ತಿಳಿದಂತೆ, ಫರಿಸಾಯರು ಎಂದಿಗೂ ಈ ಆರೋಪವನ್ನು ಯೇಸು ಮತ್ತು ಆತನ ಶಿಷ್ಯರ ವಿರುದ್ಧ ಬಳಸಲಿಲ್ಲ, ನಿಶ್ಚಿತವಾಗಿ, ಇದು ಆತನ ವಿಚಾರಣೆಯ ಸಮಯದಲ್ಲಿ ಖಂಡಿತವಾಗಿ ಈ ಆಪಾದನೆಯು ಬರಲಿಲ್ಲ. [7]ನಾವು ನಮ್ಮ ಮುಂದಿನ ಪಾಠಗಳಲ್ಲಿ ನೋಡುವಂತೆ ತನ್ನ ಶಿಷ್ಯರಿಗಾಗಿನ ಯೇಸುವಿನ ಎಚ್ಚರಿಕೆಯು ಮುಂದುವರೆಯಿತು (ನೋಡಿ ಮತ್ತಾಯ 15:39-16:12; ಮಾರ್ಕ 8:10-21). [8]ಯೇಸು ಈ ರೂಪಕವನ್ನು ಈ ಹಿಂದೆ ಬಳಸಿದ್ದನು (ಲೂಕ 6:39), ಮತ್ತು ಅದನ್ನು ಆತನು ತಿರುಗಿ ಬಳಸುತ್ತಿದ್ದಾನೆ (ಮತ್ತಾಯ 23:16, 24). [9]ಈ ಪುಸ್ತಕದಲ್ಲಿ ಸಿಕ್ಕುವ "ಪರಿಸಾಯರು ಟೀಕೆಗೊಳಗಾದಾಗ" ಎಂಬ ಪಾಠವನ್ನು ನೋಡಿರಿ. [10]ಕೆಲ ಬರಹಗಾರರು ಯೇಸು ಫೋಯನಿಕಕ್ಕೆ ಸುವಾರ್ತಾ ಉದ್ದೇಶದಿಂದ ಹೋದನು ಎಂದು ಸೂಚಿಸುವವರಾಗಿದ್ದಾರೆ, ಆದರೆ ಮಾರ್ಕ 7:24 ಮತ್ತಾಯ 15:24 ಇದು ಆ ಪ್ರಕರಣವಲ್ಲ ಎಂದು ಸೂಚಿಸುವುದಾಗಿದೆ.

[11]ತೂರ್ ಮತ್ತು ಫೊಯನಿಕಗಳು ಯೆಹೂದಿ ಜನರ ಪ್ರಾಚೀನ ಇತಿಹಾಸದಲ್ಲಿ ಎರಡೂ ಸಕಾರಾತ್ಮಕವಾಗಿ ಮತ್ತು ನಕಾರಾತ್ಮಕವಾಗಿ ಭಾಗವಾಗಿ ಕಾರ್ಯಮಾಡಿವೆ. [12]ಮೂಲಭಾಗದಲ್ಲಿ "ಗ್ರೀಕ್" ಎಂದಿದೆ (ನೋಡಿ KJV). "ಗ್ರೀಕ್"ಎಂಬ ಪದವು ಅನ್ಯಜನರನ್ನು ಸೂಚಿಸಲು ಸಾಮಾನ್ಯವಾಗಿ ಹೊಸ ಒಡಂಬಡಿಕೆಯಲ್ಲಿ ಹಲವು ಬಾರಿ ಬಳಸಲ್ಪಟ್ಟಿವೆ. [13]ಯೋಹಾನ 4:25ರಲ್ಲಿ ಸಮಾರ್ಯ ಸ್ತ್ರೀಯು ಬಳಸಿದ "ಮೆಸ್ಸೀಯ"ಎಂಬ ಪದವನ್ನು ಈ ಪರಿಚ್ಛೇದದೊಡನೆ ಹೋಲಿಸಿರಿ. [14]ಇದು ಅವರ "ಎಲ್ಲದಕ್ಕೂ ಇರುವಂಥ ಪರಿಹಾರ"ದ ಉಪದ್ರವವಿರುವ ಸಮಸ್ಯೆಯಾಗಿದೆ (ನೋಡಿರಿ ಮತ್ತಾಯ 14:15). ಮತ್ತಾಯ 15:24ರ ಬೆಳಕಿನಲ್ಲಿ, ಅವಳಿಗೆ ಏನು ಬೇಕಾಗಿತೋ ಅದನ್ನು ಯೇಸು ಅವಳಿಗೆ ಕೊಡಬೇಕಿತ್ತು ಇದರಿಂದ ಅವಳು ಹೋಗಿಬಿಡುತ್ತಿದ್ದಳು ಮತ್ತು ಅವರನ್ನು ಏಕಾಂತವಾಗಿ ಬಿಡುತ್ತಿದ್ದಳೇನೋ ಎಂದು ಅವರು ಸೂಚಿಸುವವರಾಗಿರಬಹುದು. [15]"ಮೊದಲು" ಎಂಬ ಪದವು ನಂತರದಲ್ಲಿ ಅನ್ಯಜನರು ತಮ್ಮ ಅವಕಾಶವನ್ನು ಹೊಂದಿರಬಹುದು ಎಂದು ಸೂಚಿಸುವುದಾಗಿದ್ದು ಅದು ಅವರದ್ದೇ ಆದ ಸಂಗತಿಯಾಗಿರಬಹುದು. [16]ಕ್ರಿಸ್ತನು ಎಲ್ಲ ಜನರಿಗೆ ಸುವಾರ್ತೆಯನ್ನು ತೆಗೆದುಕೊಂಡು ಹೋಗುವ ದೊಡ್ಡ ನಿಯೋಗವನ್ನು ಕೊಟ್ಟಾಗ ಇದು ಸಂಭವಿಸಿತು (ಮತ್ತಾಯ 28:18-20; ಮಾರ್ಕ 16:15, 16). [17]ಅವರು ನಿಶ್ಚಲಗೊಳಿಸಿದ್ದನ್ನು ಇಲ್ಲಿ ಸಂಪೂರ್ಣಗೊಳಿಸಬಹುದೆಂದು ಫೊಯನಿಕದಲ್ಲಿ

ಯೇಸು ಸಹಾಯದ ವಿನಂತಿಗಳಿಂದ ಸರಳವಾಗಿ ಜಾರಿಕೊಳ್ಳಬಹುದಿತ್ತು. [18]ಮುಂದಿನ ವಿವರಣೆಗಳು ಮುಂದಿನ ಭಾಗದಲ್ಲಿನ "ಜನಜಂಗುಳಿಯಿಂದ ಅಡ್ಡಿಪಡಿಸುವಿಕೆ" ಪಾಠದಲ್ಲಿ ಕೊಡಲ್ಪಟ್ಟಿದೆ. [19]ಯೋಹಾನ 3ರಲ್ಲಿ ಯೆಹೂದಿ ನಾಯಕರೊಡನೆ ಆತನ ಸಮೀಪಿಸುವಿಕೆಯು ಯೋಹಾನ 4ರಲ್ಲಿ ಸಮಾರ್ಯ ಸ್ತ್ರೀಯೊಡನೆಯ ಆತನ ಸಮೀಪಿಸುವಿಕೆಯೊಡನೆ ವ್ಯತ್ಯಾಸದಂತಿದೆ. [20]B. S. Dean, "An Outline of New Testament History," *Truth for Today* (March 1992): 20.

[21]ಪ್ರತಿಸಾರಿ ಯೇಸು ಅನ್ಯ ಜನರಿಗೆ ಸಹಾಯಿಸುತ್ತಿದ್ದಾಗ, ದೇವರು ಯೆಹೂದ್ಯರಲ್ಲದವರಲ್ಲೂ ಆಸಕ್ತನಾಗಿದ್ದಾನೆ ಎಂಬ ಬಲವಾದ ಸಾಧ್ಯತೆಯು ಇದೆ. [22]ಆತನು ಗಲಿಲಾಯದಿಂದ ದೆಕೋಪೊಲಿಯಕ್ಕೆ ಹೋಗಲಿಲ್ಲ, ಮತ್ತು ಆತನು ಅಲ್ಲಿಂದ ಹೊರಕ್ಕೂ ಹೋಗಲಿಲ್ಲ ಆದರೂ ಕೆಲ ಸಂಗತಿಗಳು ಇದನ್ನು ಯೇಸುವಿನ "ಗಲಿಲಾಯದಿಂದ ಎರಡನೆಯ ಹೊರಹೋಗುವಿಕೆ" ಮತ್ತು ಇತರವುಗಳು ಇದನ್ನು "ಗಲಿಲಾಯದಿಂದ ಮೂರನೆಯ ಹೊರಹೋಗುವಿಕೆ" ಎಂದು ಕರೆಯುತ್ತವೆ, ಆತನ ಹೊರಹೋಗುವಿಕೆಯು ಅಷ್ಟು ಮುಖ್ಯವಲ್ಲ ಮತ್ತು ಹಾಗಿದ್ದಾದರೆ ಅದರ ಸಂಖ್ಯೆಯು ಎಷ್ಟನೆಯದು. ಆ ಸಮಯದ ಆರಂಭದಲ್ಲಿ ಕ್ರಿಸ್ತನು ಹೆರೋದನ ಪ್ರಾಂತ್ಯಗಳಿಂದ ದೂರವಿರುತ್ತಿದ್ದನು ಎಂಬುದನ್ನು ತಿಳಿದುಕೊಳ್ಳಲು ಇದ ಸಾಕಾಷ್ಟಾಗಿದೆ. [23]ದೆಕೊಪೋಲಿಯವನ್ನು ಈ ಪುಸ್ತಕದಲ್ಲಿ ಸಿಕ್ಕುವ "ಯೇಸುವಿನ ಸೇವೆಯ ಆರಂಭದಲ್ಲಿ ಪ್ಯಾಲಿಸ್ಟೇನ್" ಎಂಬ ನಕಾಶೆಯನ್ನು ನೋಡಿರಿ. [24]ಕೂತುಕೊಳ್ಳುವದು ಆ ದಿನಗಳಲ್ಲಿ ಬೋಧನೆಗಾಗಿ ಇರುವ ಶೈಲಿ ಆಗಿತ್ತು (ಮತ್ತಾಯ 5:1, 2). [25]ಮೂಲ ವೇದಭಾಗವು "ತೆಗೆದು ಹಾಕಿದನು" ಎಂದಿದೆ (ಮತ್ತು ಹೋಲಿಸಿರಿ). ಅಸ್ವಸ್ಥತೆಯಲ್ಲಿರುವವರನ್ನು ಅವರು ಉಪಚರಿಸಲಿಲ್ಲ ಎಂದು ನಾವು ಹೇಳಲಾಗದು, ಆದರೆ ಅಲ್ಲಿನ ಪದಗಳು ಅವರ ಅವಸರದ ಮತ್ತು ಕಾಳಜಿಯನ್ನು ಸೂಚಿಸುವವುಗಳಾಗಿವೆ. [26]ಈ ಅನುಪ್ರಾಸವನ್ನು ನೀವು ಮೆಚ್ಚುವವರಾಗಿದ್ದರೆ, ಈ ಕೆಳಗಿನ ಪದಗುಚ್ಛಗಳನ್ನು ಅನುಸರಿಸಲು ನೀವು ಬಯಸಬಹುದು: ಹಿಂದೆ, ಆ ಪ್ರದೇಶದ ಜನರು "ನಿಮ್ಮ ದಂಡೆಯಿಂದ ದೂರವಿರು" ಎಂದು ಹೇಳಿದರು. ಅದೇ ಜನರು ಈಗ "ನಮ್ಮ ಅಸ್ವಸ್ಥತೆಯಲ್ಲಿ ಸಹಾಯಿಸು" ಎಂದು ಬೇಡಿಕೊಳ್ಳುತ್ತಿದ್ದಾರೆ. ಇನ್ನೊಂದು ಸಾಧ್ಯತೆ ಎಂದರೆ "ನಮ್ಮ ದಂಡೆಯಿಂದ ದೂರವಿರು" ಅದಕ್ಕೆ ವಿರುದ್ಧವಾಗಿ "ನಮ್ಮ ಅನಾ ರೋಗ್ಯದಲ್ಲಿ ಸಹಾಯಿಸು." [27]ಈ ಗುಂಪು ಹಿಂದಿನ ಪೂರ್ವದ ತೀರದ (ಐದು ಸಾವಿರ ಜನರ) ಗುಂಪಿಗಿಂತಲೂ ವಿಭಿನ್ನ ತರದ ಗುಂಪಾಗಿತ್ತು. ಇದು ಕಪೆರ್ನೌಮಿನಿಂದ ಯೇಸುವನ್ನು ಹಿಂಬಾಲಿಸಿತ್ತು ಮತ್ತು ಮೂಲತಹವಾಗಿ ಇವರು ಅನ್ಯಜನಾಂಗದವರಾಗಿದ್ದರು. [28]ಮೂಲ ವೇದಭಾಗವು "ಅಂಗಹೀನತೆಯು" "ಎಲ್ಲವನ್ನೂ" ಮಾಡುವುದಾಗಿದೆ ಎಂದು ಹೇಳುವುದಾಗಿದೆ (ನೋಡಿರಿ KJV). "ಕೈ ಕಾಲುಗಳನ್ನು ಕಳಕೊಂಡವರನ್ನು ಕರೆದುಕೊಂಡು ಹೋದರೆ ಏನು ಸಂಭವಿಸಬಹುದು ಎಂದ ಊಹಿಸಿಕೊಳ್ಳಿರಿ?" [29]"ಇಸ್ರಾಯೇಲ್ಯರ ದೇವರು" ಎಂಬ ಪದವು ಇದೊಂದು ದೊಡ್ಡ ಅನ್ಯರ ಗುಂಪಾಗಿತ್ತು ಎಂಬುದಕ್ಕೆ ಮುಂದೆ ಆಧಾರವಾಗಿದೆ. [30]ಪ್ರತ್ಯಕ್ಷವಾಗಿ, ಆ ಮನುಷ್ಯನ ತೊಂದರೆಯು ಮಾತನಾಡುವುದರಲ್ಲಿತ್ತೇ ಹೊರತು ಕೇಳುವುದರಲ್ಲಿ ಇರಲಿಲ್ಲ, ಮಾರ್ಕ 7:35. "ಆತನು ನಾಲಿಗೆಗೆ ಕಟ್ಟನ್ನು" ಹೊಂದಿದ್ದನು ಎಂದು ಸೂಚಿಸುತ್ತದೆ.

[31]"ಉಗುಳನ್ನು" ಎಂಬ ಪದವು NASB ಯಲ್ಲಿ ಇಟ್ಯಾಲಿಕ್‌ನಲ್ಲಿದ್ದು ಅದು ಭಾಷಾಂತರಕಾರರಿಂದ ಸೇರಿಸಲ್ಪಟ್ಟಿವೆ ಎಂದು ಸೂಚಿಸಲ್ಪಟ್ಟಿದೆ. ಗ್ರೀಕ್ ವೇದಭಾಗದಲ್ಲಿ ಅಕ್ಷರ ಸಹ "ಆತನು ಉಗುಳಿ ಆತನ ನಾಲಿಗೆ ಹಚ್ಚಿದನು" ಎಂದಿದೆ. ಮೂಲವೇದಭಾಗದಲ್ಲಿ ಕ್ರಿಸ್ತನು ಎಲ್ಲಿ ಉಗುಳಿದನು ಅಥವಾ ಆ ಉಗುಳಿನೊಂದಿಗೆ ಏನು ಮಾಡಿದನು ಎಂಬುದು ಸೂಚಿತವಾಗಿಲ್ಲ. [32]ಇದು ಒಂದು ಅರಮಾಯ ಪದವಾಗಿದೆ. [33]ನನ್ನ ಭಾಗದಲ್ಲಿ ಇದನ್ನು "ಆತನು ತನ್ನ ಸ್ವಸ್ಥಮಾಡುವಿಕೆಯ ಶಕ್ತಿಯನ್ನು ಸ್ವಯಂಚಾಲಿತದೆಡೆಗೆ ಇರಿಸಿರಲಿಲ್ಲ" ಎಂದು ಹೇಳಬಹುದಾಗಿದೆ. [34]J. W. McGarvey and Philip Y. Pendleton, *The Fourfold Gospel or A Harmony of the Four Gospels* (Cincinnati: Standard Publishing Co., 1914), 403. McGarvey's reference was to Frederic W. Farrar, *The Life of Christ* (New York: Cassell & Co., 1885), 229–30. [35]ಸಭೆಯು ಯೆರೂಸಲೇಮಿನಿಂದ ಬೇರೆಯಾದಾಗ (ಅಪೊಸ್ತಲರ ಕೃತ್ಯಗಳು 8:1-4), ಪ್ಯಾಲೇಸ್ತೈನಿನ ಸುತ್ತಲಿನ ಪ್ರದೇಶದುದ್ದಕ್ಕೂ ಹೊರಟು ಹೋದರು (ಅಪೊಸ್ತಲರ ಕೃತ್ಯಗಳು 8:2, 5; 11:19). ಸ್ನಾನಿಕನಾದ ಯೋಹಾನ, ಯೇಸು ಮತ್ತು ಅಪೊಸ್ತಲರು ಈ ಹಿಂದೆ ಮಾಡಿದ ಕೆಲಸದಿಂದಾಗಿ ಅವರಲ್ಲಿ ಅನೇಕರ ಹೃದಯಗಳು ಶೀಘ್ರವಾಗಿ ಗ್ರಹಿಸಬಲ್ಲವುಗಳು ಆಗಿದ್ದವು. [36]ಐದು ಸಾವಿರ ಜನರಿಗೆ ಆತನು ಮಾಡಿದ್ದನ್ನು ಇದರೊಂದಿಗೆ ಹೋಲಿಸಿರಿ (ಮಾರ್ಕ 6:34; ಮತ್ತಾಯ 14:14). [37]ಮತ್ತಾಯ 14:13, 14; ಮಾರ್ಕ 6:32-34; ಲೂಕ 9:10, 11ನ್ನು ಓದಿರಿ. ಈ ಪುಸ್ತಕದಲ್ಲಿ ಸಿಕ್ಕುವ "ಜನರಿಗೆ ನಿಜವಾಗಿ ಸಹಾಯದ ಅವಶ್ಯಕತೆಯು ಇದ್ದಾಗ" ಎಂಬ ಪಾಠದಲ್ಲಿನ ವಚನಗಳ ಮೇಲಿನ ವಿಶೇಷಣೆಯನ್ನು ಸಹ ಪುನರಾವರ್ತಿಸಿರಿ. [38]*ಕ್ರಿಸ್ತನ ಜೀವನ ಚರಿತ್ರೆ, 1ನೇ* ಪುಸ್ತಕದಲ್ಲಿ ಸಿಕ್ಕುವ "ಸೇವಕನಾದ ಕ್ರಿಸ್ತ,

ಮಾರ್ಕನ ಪುಸ್ತಕ" ಪಾಠವನ್ನು ಪುನರಾವರ್ತಿಸಿರಿ. [39]ನಾಲ್ಕು ಸಾವಿರ ಜನರಿಗೆ ಊಣಬಡಿಸಿದುದರಲ್ಲಿನ ಭಿನ್ನತೆಯನ್ನು ಗ್ರೀಕ್ ಪದವಾದ "ಪುಟ್ಟಿ" ಎಂಬುದರಲ್ಲಿ ಎರಡನೆಯ ಸಾರಿ ಊಟಬಡಿಸುವದಕ್ಕೆ ಉಪಯೋಗಿಸುವುದಾಗಿದೆ "ಪುಟ್ಟಿ" ಎಂಬುದಕ್ಕೋಸ್ಕರದ ಪದವು "ದೊಡ್ಡ ಬುಟ್ಟಿ" ಎಂಬ ಅರ್ಥವನ್ನು ಕೊಡುವವದಾಗಿದೆ. ಇವು ಎಷ್ಟು ದೊಡ್ಡವಿರುತ್ತವೆಂದರೆ ಕೆಲ ಸಾರಿ ಮನುಷ್ಯನನ್ನು ಕೂಡಾ ಅದರಲ್ಲಿ ಹಿಡಿದಿಟ್ಟುಕೊಳ್ಳುವ ಸಮರ್ಥ್ಯವನ್ನು ಆ ಬುಟ್ಟಿಯು ಹೊಂದಿರುತ್ತಿತ್ತು. [40]J. W. McGarvey, ಇಸ್ರಾಯೇಲ್ಯರ ಮತ್ತು ಆ ಹನ್ನೆರಡು ಮಂದಿಯ ಇತಿಹಾಸದಲ್ಲಿ ಹಿಂದಿನ ಅನುಭವವು ಸಾಮಾನ್ಯವಾದ ಸಂಭಿಸುವಿಕೆಯು ಆಗಿದ್ದು ಇದು ಅದ್ಭುತ ಕಾರ್ಯಗಳನ್ನು ಎದುರು ನೋಡುವಿಕೆಯ ವಿಫಲತೆಯಾಗಿದೆ ಎಂದು ಬರೆಯುತ್ತಾರೆ [ನೋಡಿ ಅರಣ್ಯಕಾಂಡ 11:21-13; ಕೀರ್ತನೆ 78:19, 20].

[41]Robert Lawrence Balzer, quoted in Leonard Louis Levinson, *Webster's Unafraid Dictionary* (New York: Collier Books, 1967), 138. [42]ಈ ಪುಸ್ತಕದಲ್ಲಿ ಸಿಕ್ಕುವ "ಫರಿಸಾಯರು ಉಲ್ಲಂಘಿಸಲ್ಪಟ್ಟಾಗ" ಎಂಬ ಪಾಠವನ್ನು ನೋಡಿರಿ. [43]Adapted from Alger Fitch, *Preaching Christ* (Joplin, Mo.: College Press, 1992), 79. [44]Richard Rogers, *Behold Your King (Book of Matthew)* (Lubbock, Tex.: Sunset Study Series, n.d.), 19.